ಅಚಲ

ದ್ವೈಮಾಸಿಕ, ಜುಲೈ 8, 1993



ಜಾಗೃತಿ ಮಹಿಳಾ ಅಧ್ಯಯನ ಕೇಂದ್ರ, ಬೆಂಗಳೂರು

ಸಂಪುಟ : 9 ಸಂಚಿಕೆ : 3

''ಅಚಲ'' ಪತ್ರಿಕೆಯನ್ನು ಪಡೆಯ ಬಯಸುವವರು ದಯವಿಟ್ಟು ಕೆಳಗಿನ ವಿಳಾಸಕ್ಕೆ ಹದಿನೈದು ರೂಪಾಯಿಗಳನ್ನು ಎಂ. ಓ/ಡ್ರಾಫ್ಟ್ ಮೂಲಕ ಕಳುಹಿಸಿ, ಕೂಪನ್‌ನಲ್ಲಿ ತಮ್ಮ ವಿಳಾಸವನ್ನು ಸ್ಪಷ್ಟವಾಗಿ ಬರೆಯಬೇಕು. ಚೆಕ್ ಮೂಲಕ ಹಣ ಕಳಿಸುವವರು 20/ರೂ. ಗಳಿಗೆ ಕಳಿಸಬೇಕು. ಚಂದಾದಾರರು ತಮ್ಮ ವಿಳಾಸ ಬದಲಾದರೆ ಕೂಡಲೆ ಕಾರ್ಡಿನಲ್ಲಿ ಬರೆದು ತಿಳಿಸಬೇಕು.

ಚಂದಾ ವಿವರ :

ವಾರ್ಷಿಕ ಚಂದಾ	:	ರೂ. 15.00
ಆಜೀವ ಚಂದಾ	:	ರೂ. 150.00
(ಚೆಕ್ ಮೂಲಕ	:	ರೂ. 160.00)
ಸಂಸ್ಥೆಗಳಿಗೆ	:	ರೂ. 200.00
ಬಿಡಿ ಪ್ರತಿ	:	ರೂ. 2.00
ವಿಶೇಷ ಪ್ರತಿ	:	ರೂ. 3.50

Printed at Lipi Mudrana,
No. 1, Bugle Rock Road, Bangalore-4.
Published by, Dr. G. Ramakrishna on behalf of Jagruthi Mahila Adhyayana Kendra, 261, I Main Road, Vyalikaval, Bangalore-3

ಲೇಖನ, ಹಣ ಕಳುಹಿಸಬೇಕಾದ ವಿಳಾಸ :–

ಎನ್. ಗಾಯತ್ರಿ
ಬಿ–30, ರಿಸರ್ವ್ ಬ್ಯಾಂಕ್ ಸ್ಟಾಫ್ ಕ್ವಾರ್ಟರ್ಸ್,
9ನೇ ಕ್ರಾಸ್, ಒಂದನೇ ಮೇನ್
ವಿಜಯನಗರ 2ನೇ ಹಂತ
ಬೆಂಗಳೂರು : 560 040

ಶ್ರದ್ಧಾಂಜಲಿ

ಮೇ 8 ರಂದು ನಿಧನರಾದ ಡಾ॥ ದೇವಿಪ್ರಸಾದ್ ಚಟ್ಟೋಪಾಧ್ಯಾಯರವರ ಮರಣದಿಂದ ಭಾರತದ ವೈಚಾರಿಕ ಜಗತ್ತಿನ ಧ್ರುವತಾರೆಯೊಂದು ಹಠಾತ್ತನೆ ಕಣ್ಮರೆಯಾದಂತಾಗಿದೆ, ಅಂತರರಾಷ್ಟ್ರೀಯ ಮಾರ್ಕ್ಸ್‌ವಾದಿ ತತ್ತ್ವಶಾಸ್ತ್ರಜ್ಞರಲ್ಲಿ ಒಬ್ಬರಾದ ಹಾಗೂ ಭಾರತೀಯ ತತ್ವಶಾಸ್ತ್ರಕ್ಕೆ ಹೊಸ ಒಳನೋಟಗಳನ್ನು ನೀಡಿದ, ಶ್ರಮಿಕರ ಬೌದ್ಧಿಕ ಶಿಲ್ಪಿ ದೇವಿಪ್ರಸಾದರ ಸಾವಿಗೆ ಅಚಲ ತನ್ನ ಶ್ರದ್ಧಾಂಜಲಿಯನ್ನು ಅರ್ಪಿಸುತ್ತದೆ.

ದೇವಿಪ್ರಸಾದ್‌ರವರ ವಿಚಾರಧಾರೆಯನ್ನು ಪರಿಚಯಿಸುವ ಲೇಖನವೊಂದು ಈ ಸಂಚಿಕೆಯಲ್ಲಿದೆ. ಶಂಕರಾಚಾರ್ಯರಂತಹ ವಾದಪಟುಗಳು ತತ್ವಶಾಸ್ತ್ರಜ್ಞರೂ ಕೂಡ ಮನುವಿನಂತಹ ಧರ್ಮಶಾಸ್ತ್ರಕಾರರ ನಿರ್ದೇಶನವನ್ನು ಮೀರಿ ನಿಲ್ಲಲಾಗಲಿಲ್ಲ. ಈ ಸತ್ಯವನ್ನು ಪ್ರತಿಪಾದಿಸುವ ದೇವಿಪ್ರಸಾದರ ಲೇಖನವನ್ನು ಅತ್ಯಂತ ಸಶಕ್ತವಾಗಿ ಪರಿಣಾಮಕಾರಿಯಾಗಿ ಡಾ॥ ಜಿ. ರಾಮಕೃಷ್ಣರವರು ಇಲ್ಲಿನ ಅನುವಾದ ಮಾಡಿಕೊಟ್ಟಿದ್ದಾರೆ.

—ಸಂಪಾದಕರು

ಸಂಪಾದಕೀಯ

ಮನುವಿನ ಕಾಲ ಮತ್ತೆ ಬರಬೇಕೇ ?

ಭಾರತ ಹಿಂದೆಂದಿಗಿಂತ ಇಂದು ಆರ್ಥಿಕವಾಗಿ, ಸಾಂಸ್ಕೃತಿಕವಾಗಿ ಮತ್ತು ರಾಜಕೀಯವಾಗಿಯೂ ಅತ್ಯಂತ ಕ್ಲಿಷ್ಟವಾದ ಮತ್ತು ಭವಿಷ್ಯಶೂನ್ಯವಾದ ಸ್ಥಿತಿಯನ್ನು ಎದುರಿಸುತ್ತಿದೆ. ಮತಾಂಧತೆಯ ಭೀಕರ ಪರಿಣಾಮಗಳನ್ನು ಇತಿಹಾಸದುದ್ದಕ್ಕೂ ಭಾರತೀಯರು ಅನುಭವಿಸಿರುವರಾದರೂ ಇಂದು ಅದರ ಛಾಯೆ ಮತ್ತು ಆಯಾಮಗಳು ಹಲವು ಮುಖಗಳ ಹಾಗೂ ಹಲವು ಬಣ್ಣಗಳ ಸ್ವರೂಪವನ್ನು ತಾಳಿವೆ. ಇದರ ಘೋರ ಪರಿಣಾಮಕ್ಕೆ ಭಾರತೀಯ ಮಹಿಳೆ ಹೊರತಾದವಳೇನಲ್ಲ.

ಇಂದು ಮತಾಂಧತೆಯನ್ನೇ ರಾಜಕೀಯ ಮೌಲ್ಯವಾಗಿಸಿಕೊಂಡಿರುವ ರಾಜಕೀಯ ಪಕ್ಷಗಳು ದೇಶದ ಜನರ ಭಾವನೆಗಳ ಮೇಲೆ ಅತ್ಯಂತ ಪ್ರಭಾವ ಬೀರಿ ಅಧಿಕಾರಕ್ಕೆ ಬರಲು ಹವಣಿಸುತ್ತಿವೆ. ಬೇರಾವುದೇ ರಾಜಕೀಯ ಪಕ್ಷಕ್ಕಿರುವಂತೆ ಭಾರತೀಯ ಜನತಾಪಕ್ಷವೂ ರಾಜಕೀಯ ಅಧಿಕಾರವನ್ನು ತನ್ನದಾಗಿಸಿಕೊಳ್ಳುವ ಹಕ್ಕು ಪಡೆದಿದೆ–ಯಾದರೂ ಇಂತಹದೊಂದು ಅಧಿಕಾರದ ಗಳಿಕೆಗೆ ಪಕ್ಷವು ಅನುಸರಿಸುತ್ತಿರುವ ಮಾರ್ಗವು ಮಾತ್ರ ವಕ್ರದಾರಿಯದು. ಆದ್ದರಿಂದಲೇ ಈ ಪಕ್ಷವು ಅಧಿಕಾರವನ್ನು ದಕ್ಕಿಸಿಕೊಳ್ಳಲು ಬಯಸುವ ವಿಧಾನ, ಅದರ ಹಿಂದಿನ ಉದ್ದೇಶ ಮತ್ತು ಅಧಿಕಾರ ಪಡೆದ ನಂತರ ಉಂಟಾಗಬಹುದಾದ ಸಾಂಸ್ಕೃತಿಕ–ಸಾಮಾಜಿಕ ಪರಿಣಾಮಗಳ ಬಗ್ಗೆ ಭಾರತೀಯ ಜನತೆ ಎಚ್ಚರ ವಹಿಸುವುದು ತೀರ ಅಗತ್ಯ. ಅದರಲ್ಲಿ ಇಂತಹ ಪರಿಣಾಮಗಳ ಭೀಕರತೆಗೆ ಮೊದಲು ತಲೆಕೊಡಬೇಕಾದವಳು ಭಾರತೀಯ ಮಹಿಳೆಯೇ ಆಗಿರುತ್ತಾಳೆ.

ರಾಷ್ಟ್ರೀಯ ಸ್ವಯಂ ಸೇವಕ ಸಂಘ ಹಾಗೂ ಅವರ ಧರ್ಮಸಂಸತ್ತು ಮೊದಲನೆಯದಾಗಿ ಮಹಿಳೆ ರಾಜಕೀಯದಿಂದ ದೂರ ಸರಿಯಲು ಕರೆಕೊಟ್ಟಿದೆ. ಗ್ವಾಲಿಯರ್ 'ರಾಜಮಾತೆ', ಸಾಧ್ವಿ ಋತಂಭರಾ, ಉಮಾಭಾರತಿ ಇಂತಹ ಸಂಘ–ಸಾಧ್ವಿಗಳಿಗೆ ಈ ಮಾತು ಅನ್ವಯಿಸುವುದಿಲ್ಲವೇನೊ ! ಧರ್ಮಸಂಸತ್ತಿನ ನಿರ್ಣಯಗಳು ಭಾರತೀಯ ಮಹಿಳೆಯನ್ನು ಶತಮಾನದ ಹಿಂದಕ್ಕೆ ಒಯ್ಯುವುದರಲ್ಲಿ ಸಂಶಯವೇ ಇಲ್ಲ. ಹಿಂದೂ ಸಂತತಿಯನ್ನು ಹೆಚ್ಚಿಸಲು ಹಿಂದೂಗಳಲ್ಲೂ ಬಹುಪತ್ನಿತ್ವವನ್ನು ಪ್ರೋತ್ಸಾಹಿಸಬೇಕೆನ್ನುವ ಸಂಸತ್ತಿನ ನಿರ್ಣಯ ಗಂಡಸಿನ ಸ್ವೇಚ್ಛಾಚಾರವನ್ನು ಪೋಷಿಸುವುದಲ್ಲದೇ, ಹೆಣ್ಣನ್ನು ಒಂದು ಸರಕಾಗಿ, ಕೂಸು ಹಡೆಯುವ ಯಂತ್ರವಾಗಿ ಪರಿವರ್ತಿಸುವುದರಲ್ಲಿ ಅನುಮಾನವೇ ಇಲ್ಲ.

ಭಾರತೀಯ ಜನತಾಪಕ್ಷದ ಮಹಿಳಾ ಘಟಕದ ಧ್ಯೇಯೋದ್ದೇಶಗಳು, ಕಾರ್ಯಕ್ರಮಗಳು ಒಟ್ಟಾರೆಯಾಗಿ ಆ ಪಕ್ಷ ಹೆಣ್ಣಿನ ಬಗೆಗೆ ತಳೆದಿರುವ ಧೋರಣೆಯನ್ನು ಪ್ರತಿನಿಧಿಸುತ್ತವೆ. ಅಷ್ಟೇ ಅಲ್ಲ, ಭಾರತೀಯ ಜನತಾಪಕ್ಷ ಅಧಿಕಾರಕ್ಕೆ ಬಂದರೆ ಭಾರತೀಯ ಹೆಣ್ಣು ಏನಾಗಬಲ್ಲಳು ಎಂಬುದರ ಸೂಚಿಯೂ ಆಗಿದೆ.

ಎರಡು ತಿಂಗಳುಗಳ ಹಿಂದೆ ಕೆಲವು ಪತ್ರಿಕೆಗಳಲ್ಲಿ ಪ್ರಕಟವಾದ ಭಾರತೀಯ ಜನತಾಪಕ್ಷದ ಮಹಿಳಾ ಘಟಕದ ಅಧ್ಯಕ್ಷೆ ಮೃದುಲಾ ಸಿನ್ಹಾರವರ ಸಂದರ್ಶನ ಸ್ತ್ರೀಪರ ಚಿಂತನೆಗೆ ಭಾರಿ ಪೆಟ್ಟು ಕೊಡುತ್ತದೆ. ಹೆಣ್ಣಿನ ಕಾರ್ಯಕ್ಷೇತ್ರವನ್ನು ಕುಟುಂಬದಲ್ಲಿ ಮಾತ್ರ ಸಾಧ್ಯವೆನ್ನುವ ಈ ಮಹಾಧ್ಯಕ್ಷೆಗೆ ಸ್ತ್ರೀವಾದಿ ಚಳುವಳಿಗಳು, ಹೆಣ್ಣಿನ

ಆರ್ಥಿಕ ಚಟುವಟಿಕೆಗಳು ಅರ್ಥಹೀನವೆನಿಸುತ್ತವೆ; ಅನವಶ್ಯಕವೆನಿಸುತ್ತವೆ. ಭಾರತೀಯ ಸಮಾಜದ ಅತ್ಯಂತ ಹೀನ ಪದ್ಧತಿಯಾದ ವರದಕ್ಷಿಣೆಯನ್ನು ಬೆಂಬಲಿಸುವ ಈ ನಾರೀಮಣಿ ಹೆಣ್ಣು ಆಸ್ತಿಹಕ್ಕನ್ನು ಕೇಳುವುದು ಮಹಾಪರಾಧ ವೆಂದು ಬಗೆಯುತ್ತಾಳೆ.

ಭಾರತೀಯ ಜನತಾಪಕ್ಷದ ಮಹಿಳಾಧ್ಯಕ್ಷೆಯು ಪರಿಕಲ್ಪಿಸಿರುವ ಜಾಗೃತ ಮಹಿಳೆಯ ಸ್ವರೂಪವೆಂದರೆ ಅವಳು ಸೀತೆ ಮತ್ತು ಸಾವಿತ್ರಿಯ ಮಿಶ್ರರೂಪವಾಗಿರಬೇಕು. ತಂದೆ ಮನೆಯ ವೈಭವವನ್ನೆಲ್ಲ ತೊರೆದು ನಾರುಡೆಗೆ ಯಲ್ಲಿ ಗಂಡನನ್ನು ಹಿಂಬಾಲಿಸಿದ ಸೀತೆಯಂತಿರಬೇಕು. ಕಟ್ಟಿಕೊಂಡ ಹೆಂಡತಿಗೆ ಹೊಡೆಯುವ ಪಕ್ಕಾ ಗಂಡನಿಗಿರುವು ದನ್ನು ಈಕೆ ಸಮರ್ಥಿಸುವುದರಿಂದ ಆಧುನಿಕ ಸೀತೆಗೆ ಈ ಹೊಸ ಹೊಡೆತದ ರುಚಿಯೂ ದೊರೆಯುವ ಅದೃಷ್ಟವಿದೆ! ಯಮಧರ್ಮರಾಯನ ಮೃತ್ಯುಪಾಶದಿಂದ ಗಂಡನ ಜೀವ ಹಿಂತಿರುಗಿಸಿ ತಂದ ಸಾವಿತ್ರಿಯಂತಿರಬೇಕು ಎಂದು ಬಯಸುವ ಮೃದುಲಾಸಿನ್ಹಾರವರು ಸತ್ತ ಪತಿಯನ್ನು ಹಿಂದಕ್ಕೆ ತರಲಾಗದಿದ್ದರೆ ಸಾವಿತ್ರಿಯು ಸತಿ ಹೋಗಬೇಕೆಂದು ಸೂಚಿಸಲಾರರೇ? ರೂಪಕನ್ವರಳು ಸತಿ ಹೋದಾಗ ಈ ಪಕ್ಷದ ವರಿಷ್ಠರು, ಬೆನ್ನೆಲುಬಾದ ಮಠಶ್ರೇಷ್ಠರು 'ಧರ್ಮ ಸಮ್ಮತ ಸತಿಯನ್ನು ಬೆಂಬಲಿಸಿರಲಿಲ್ಲವೇ ?.

ಒಟ್ಟಿನಲ್ಲಿ ಭಾರತೀಯ ಮಹಿಳೆ ಎಚ್ಚೆತ್ತುಕೊಳ್ಳದಿದ್ದರೆ ಭವಿಷ್ಯ ಗಾಡಾಂಧಕಾರದಿಂದ ಕೂಡಿರುವುದರಲ್ಲಿ ಅನುಮಾನವೇಇಲ್ಲ, "ಸಮಕಾಲೀನನೊಬ್ಬ ಪ್ರಾಚೀನ ಕಾಲದ ಗತಿನಿಯಮಗಳನ್ನು ಅನುಸರಿಸಲು ಹಿಂತಿರುಗ ಬಯಸುವುದು ಮೂರ್ಖತನ; ತನ್ನ ದುರಂತಕ್ಕೆ ಇದರಿಂದ ಹಾದಿಮಾಡಿಕೊಂಡಂತಾಗುತ್ತದೆ," ಎಂದ ಕನ್‌ಫ್ಯೂಶಿ–ಯಸ್‌ನ ಮಾತನ್ನು ಮತ್ತೆ ಮತ್ತೆ ನೆನೆಯುತ್ತಾ ನಮ್ಮ ಮುಂದಿನ ದಾರಿಯನ್ನು ನಾವು ರೂಪಿಸಿಕೊಳ್ಳಬೇಕಾಗಿದೆ. "ಸೀತೆ+ಸಾವಿತ್ರಿಯರು ನಮ್ಮ ಆದರ್ಶವೇ? ಮತ್ತೆ ಮನುವಿನ ಕಾಲ ಬರಬೇಕೇ?" ಎಂಬ ಸವಾಲನ್ನು ಪ್ರತಿ ಯೊಬ್ಬ ಜಾಗೃತ ಮಹಿಳೆಯು ಮತ್ತೆ ಮತ್ತೆ ಎದುರಿಸಬೇಕಾಗಿದೆ.

–ಎಸ್. ಗಾಯತ್ರಿ

ಗುಂಡು ಏರಿಸಿಯೇ ಬಂದ ಗಂಡು

ಮಧ್ಯಪ್ರದೇಶದ ಪನಿಯಾತೆ ಎಂಬ ಹಳ್ಳಿ. ಮದುವೆಯ ಮಹಾ ಗದ್ದಲ ಥಟ್ಟನೆ ಸ್ತಬ್ಧವಾದದ್ದು ಗುಂಡು ಏರಿಸಿಯೇ ಹಸೆಗೇರಲು ಬಂದ ಗಂಡಿನಿಂದ. ಕಂಠಮಟ್ಟ ಕುಡಿದ ವರಮಹಾಶಯ ತನ್ನ ಮದುವೆಗೆ ಬಂದ ಹೆಣ್ಣಿನ ಕಡೆಯ ಹೆಂಗಳೆಯರನ್ನೇ ಚುಡಾಯಿಸಿದ. ತಲೆತಗ್ಗಿಸಿ ಕುಳಿತ ವಧು, ಇದು ನಾಚುವ ಸಮಯವಲ್ಲ ಎಂದು ಎದ್ದು ನಿಂತವಳೇ ಈ ಕ್ಷಣಕ್ಕೇ ಮದುವೆ ರದ್ದು ಪಡಿಸುವಂತೆ ಕೂಗಿದಳು. ಹಿರಿಯರು ತಲೆಬಾಗಿದ್ದು ಒಂದು ಆಶ್ಚರ್ಯವೆಂದರೆ, ಮತ್ತೊಂದು ಅದ್ಭುತವೂ ಕಾದಿತ್ತು. ಮದುವೆಗೆ ಬಂದ ಯುವಕನೊಬ್ಬ, ಹೆಂಡ ಮುಟ್ಟದ ಗಟ್ಟಿ ಗಂಡು, ಈ ಮಹಿಳಾ ಮಣಿಯ ದಿಟ್ಟತನಕ್ಕೆ ಥಟ್ಟನೆ ಅಲ್ಲಿಯೇ ಮನಸೋತು ಹಾರ ಹಾಕಿದ. ಕುಡುಕನೋ. ಕೆಡುಕನೋ ಪತಿಪರಮೇಶ್ವರನೆಂದು ತಲೆತೂಗುವ ನಮ್ಮ ಸಮಾಜದಲ್ಲೂ ತರಾಟೆಗೆ ತೆಗೆದುಕೊಳ್ಳಬಲ್ಲ ಹೆಣ್ಣುಗಳಿದ್ದಾರಲ್ಲ, 'ಭೇಷ್' ಎನ್ನಲೇಬೇಕಲ್ಲವೆ ?

ಕವನ

ಸ್ತಬ್ಧ ಚಿತ್ರ

–ಸುಮಿತ್ರ

ಹೊನ್ನಬೆಳಕಿಗೆ ಬೆನ್ನೊಡ್ಡಿ
ಮುಬ್ಬುಗತ್ತಲು ಹೊರಟಿದೆ ಕಾಲಾಡಿಸುತ್ತ
ಕಳೆದ ವಯಸ ಕೋಲನೂರಿ
ನಡಿಗೆ ಸಾಗಿದೆ ಎತ್ತ ?
ಯಾರದಿದು ಕರಿಗಿಡಿದ
ನಿಶ್ಚಲ ಮೂಕ ನೆರಳು
ಶಬರಿ ? ಇರಲಾರದು.

ಕಮರಿದ ಉದರ ಪದರಗಳಲ್ಲಿ
ಸಿಕ್ಕು ಸುಕ್ಕಾಗಿದೆ
ಹಡೆಯದ ಮಾಗದ ಕನಸು
ಬತ್ತಿದೆದೆಯ ಪಕ್ಕೆ
ಗಾಳಿ ಕಾಣದಿದೆ ಉಸಿರು
ಹೇಳವ್ವ ಹೊರಟೆ ಎತ್ತ.

o o o

ಕನ್ನೆಬೆಳಕಲ್ಲಿ ಲೋಕವೆಲ್ಲ ಹೊರಳಿ
ಹತ್ತು ಹಡೆದು ಕೂರುವ ಹೊತ್ತಲ್ಲಿ
ಹುಡುಗಿಗೆ ಹಲಗೆ ಬಳಪದ ಹುಚ್ಚು,
ಅಂಗಡಿ ತೆರೆವಾತಗೆ
ಹರೆಯ ಮುಚ್ಚಿದ ಬಾಗಿಲ ಹಿಂದೆಯೂ
ಹುಡುಗಿಯ ಕೈಯ ಚಪಲ

ಎದೆಯುದ್ದ ಬೆಳೆದಿದ್ದ
ಹಳೆಮಡದಿಯ ಮಕ್ಕಳಿಗೆ
ಜೀವ ತೇಯುವುದು ಹೊಸದೇನು
ಹೆಂಡತಿ ಮಾಡಬೇಕಾದದ್ದು ತಾನೆ ಏನು.

ಮುಚ್ಚಿದೆದೆಗಳ ಒಳಗೆ
ಬಿಚ್ಚದ ಬಿಕ್ಕು ಸುರುಳಿ
ಸಿಕ್ಕಾಗಿ ನಲುಗಿತೆ ಬದುಕು
ನವೆಯಿತೆ ಪ್ರಥಮ ವಯಸು

ಕೊರಳು ಉಲಿದ ದನಿಯದೇನು
ಕಣ್ಣು ಕಂಡ ಬಣ್ಣವೇನು
ಸ್ಪರ್ಶ ತಂದ ಪುಲಕವೇನು
ಉಕ್ಕಿ ಹರಿದ ಭಾವವೇನು
ಅರಿವಿಗೂ ಮೊದಲು ಮೈ
ಕಾದು ಕತ್ತಲಲ್ಲಿ ಕೂಡಿ
ಹಡೆದ ಒಡಲುಗಳ ಕೂಪ
ಏನು ಚಿತ್ತ ಎಂಥ ಬದುಕು.
ತಿರಿದ ದಕ್ಷಿಣೆ ಕಾಸ ತಿಜೋರಿ
ಚಾಗ ದುಡಿತದ ಮೂಟೆಯಡಿ
ನುಚ್ಚಾಯ್ತು ಮೊಳೆಕಟ್ಟಿದ್ದ ಬಯಕೆ ರಾಶಿ.

o o o

ಮಂಜುಗಟ್ಟಿದ ಎದೆಗೆ ಬಿಸಿಲ ಕಾವು
ಬಾಳ ಹಸುರಿಗೆ ಗೊನೆ ತಂದ ಹಿಗ್ಗಿನ ಹೊನಲು
ಮುಂದೆ ಬದುಕಿಗೆ ಒರತೆ
ಬಂಗಾರದ ಮಿರುಗು ಕಾಣಿಸಿದ ಕಂದ !
ಹೊತ್ತು ಕಟ್ಟಿದ ಹಂಬಲ ಗೋಪುರ ಕುಸಿದು
ಮಾಯವಾದನೆ ತನ್ನ ಲೋಕದಲ್ಲಿ.

ಅರಿವು ಕುಗ್ಗುವ ಹೊತ್ತು
ಮಗರಾಮನ ಕನಸಿಗಂಟಿದ ಚಿತ್ರಕ್ಕೆ
ಗೊಂದಲ ಕಸಿವಿಸಿ ಕನಲು
ತಾನೂಡಿದ ಹಾಲು ಯಶೋದೆಯದೆ ಪೂತನಿಯದೆ ?
ತಿಳಿಯಲಾಗದೆ ಗೋರಿಗಟ್ಟುತ್ತದೆ.

ಕಾಣದ ರಾಮನಿಗು ಎಧೆಯಮೃತ ಬಸಿವ
ಕಲೆ ದಕ್ಕೀತೆ ತಪಸ್ಸಾಗದ ಬದುಕಿಗೆ
'ಬರುವನೆ ರಾಮ ! ಕಾಯಲಾರನೆ?'
ಬರಬೇಕೆ ರಾಮ! ಕಾಯುವುದೇನನ್ನು ?
ಹೊತ್ತಲ್ಲಿ ಹರಿದು ಜೀವದ್ರವ
ಬರಿದಾಗಿ ನಿಂತಿದೆ ಬಾಗಿದ ಬೆನ್ನು
ಭೂತದ ಹೊರೆಯ ಹೊತ್ತು.

ತತ್ತ್ವಶಾಸ್ತ್ರದ ಮೇಲೆ ಧರ್ಮಶಾಸ್ತ್ರಕಾರರ ಹಿಡಿತ

–ಡಾ॥ ದೇವೀಪ್ರಸಾದ ಚಟ್ಟೋಪಾಧ್ಯಾಯ

ಭಾರತದ ಭಾವನಾವಾದಿ ತತ್ತ್ವಶಾಸ್ತ್ರಜ್ಞರ ಪೈಕಿ ಮಹಾಯಾನ ಬೌದ್ಧರು ಕೂಡ ಧರ್ಮಶಾಸ್ತ್ರಕಾರರ ಕಟ್ಟಪ್ಪಣೆಗೆ ತಲೆಬಾಗುವುದರಲ್ಲಿ ಅತೀವ ಆಸಕ್ತಿ ತೋರಿದ್ದರು. ಆದರೆ ಹಾಗೆ ಮಾಡುವಾಗ ಅವರು ನೇರವಲ್ಲದ ಒಂದು ಸಂಕೀರ್ಣಮಾರ್ಗವನ್ನು ಹುಡುಕಿಕೊಂಡರು. ಅಂತಹ ಯುಕ್ತಿಯೊಂದನ್ನು ಅನುಸರಿಸದೆ ನೇರವಾಗಿ ಧರ್ಮಶಾಸ್ತ್ರಕಾರರ ಒತ್ತಡಕ್ಕೆ ಮಣಿದವರೆಂದರೆ ಅದ್ವೈತ ವೇದಾಂತಿಗಳು. ಅವರು ಎಷ್ಟರಮಟ್ಟಿಗೆ ತಮ್ಮ ಅಧೀನತೆಯನ್ನು ಪ್ರಕಟಿಸುತ್ತಾರೆಂದರೆ ಕಡೆಗೆ ಅವರು ಧರ್ಮಶಾಸ್ತ್ರಕಾರರ ಕಟ್ಟಾ ದಾಸರೇನೋ ಎನಿಸುತ್ತದೆ.

ಅದ್ವೈತ ವೇದಾಂತಿಗಳಲ್ಲಿ ಪ್ರಮುಖರಾದವರು ಶಂಕರರು. ತತ್ತ್ವಶಾಸ್ತ್ರ ಗ್ರಂಥಗಳಲ್ಲಿ ಅವರ ಮಹೋನ್ನತವಾದ ಕೃತಿಯು ಬ್ರಹ್ಮಸೂತ್ರದ ಮೇಲಿನ ಭಾಷ್ಯ. ಅದನ್ನೇ ವೇದಾಂತ ಭಾಷ್ಯ ಅಥವಾ ಶಾರೀರಕ ಭಾಷ್ಯ ಎನ್ನುವುದು. ಈ ಕೃತಿಯಲ್ಲಿ ಕಾಣಬರುವ ಅಂಶಗಳಿಂದ ಅದ್ವೈತ ವೇದಾಂತಿಗಳು ಧರ್ಮಶಾಸ್ತ್ರಗಳ ಬಗ್ಗೆ ಯಾವ ನಿಲುವನ್ನು ತಾಳುತ್ತಾರೆಂಬುದನ್ನು ತಿಳಿದುಕೊಳ್ಳಬಹುದು.

ಏನು ಆ ನಿಲುವು? ವಿಶೇಷತಃ, ಮನುವಿನ ಬಗ್ಗೆ ಶಂಕರರ ನಿಲುವೇನು? ಇದರಲ್ಲಿ ಸಂಶಯಕ್ಕೆ ಆಸ್ಪದವಿಲ್ಲದಂತೆ ತಮ್ಮ ನಿಲುವನ್ನು ಶಂಕರರು ಸ್ಪಷ್ಟಪಡಿಸಿದ್ದಾರೆ. ಬ್ರಹ್ಮಸೂತ್ರದ ಎರಡನೇ ಅಧ್ಯಾಯದ ಮೊದಲ ಸೂತ್ರದ ಮೇಲೆ ವ್ಯಾಖ್ಯಾನಿಸುತ್ತಾ "ಯದ್ವೈ ಕಿಂಚ ಮನುರವದತ್ ತದ್ಭೇಷಜಮ್" (ಮನು ಹೇಳಿರುವುದೆಲ್ಲಾ ಔಷಧ ಸಮಾನ) ಎಂಬ ವಾಕ್ಯವನ್ನು ತೈತ್ತಿರೀಯ ಸಂಹಿತೆಯಿಂದ ಉದ್ಧರಿಸಿದ್ದಾರೆ. ಈ ವಾಕ್ಯದ ಬಗ್ಗೆ ಚಕಾರವೆತ್ತುವಂತಿಲ್ಲ; ಏಕೆಂದರೆ ಅದು ಶ್ರುತಿವಾಕ್ಯ. –ಹೀಗಿದೆ ಅವರ ಧೋರಣೆ.

ಈ ನಿಟ್ಟಿನಿಂದ ಅವರು ಬೆಳೆಸುವ ತರ್ಕ ಯಾವುದೇ ತತ್ತ್ವಶಾಸ್ತ್ರಜ್ಞನಿಂದ ನಾವು ನಿರೀಕ್ಷಿಸದಂತಹದ್ದು. ತತ್ತ್ವಶಾಸ್ತ್ರದ ಒಂದು ಧೋರಣೆಗೆ ಆಧಾರವಾಗಿ ಅವರು ಕೊಡುವುದು ಧರ್ಮಶಾಸ್ತ್ರಕಾರನೊಬ್ಬನ ಅಭಿಪ್ರಾಯವನ್ನು! ಒಂದು ನಿಲುವಿನ ಖಂಡನೆಗಾಗಲಿ ಮಂಡನೆಗಾಗಲಿ ಧರ್ಮಶಾಸ್ತ್ರಕಾರನೊಬ್ಬನ ಮಾತು ಹೇಗೆ ತಾನೆ ಆಧಾರವಾಗಬಲ್ಲದು? ಇದು ಶಂಕರರಿಗೆ ಅಳುಕನ್ನುಂಟು ಮಾಡುವುದಿಲ್ಲ. ಉದಾಹರಣೆಗೆ, ಕಪಿಲರ ಸಾಂಖ್ಯವಾದದ ಒಂದು ಅಂಶವನ್ನು ನಿರಾಕರಿಸಲು ಮನುವಿನ ಅಭಿಪ್ರಾಯವೊಂದನ್ನು ಬಲವಾದ ಒಂದು ವಾದವೆಂಬಂತೆ ಶಂಕರರು ಬಳಸಿಕೊಂಡಿದ್ದಾರೆ. ಅವರ ಮಾತು ಹೀಗಿದೆ: "ಮನುನಾ ಚ 'ಸರ್ವಭೂತೇಷು ಚಾತ್ಮಾನಂ ಸರ್ವಭೂತಾನಿ ಚಾತ್ಮನಿ; ಸಂಪಶ್ಯನ್ನಾತ್ಮಯಾಜೀ ವೈ ಸ್ವಾರಾಜ್ಯಮಧಿಗಚ್ಛತಿ' ಇತಿ ಸರ್ವಾತ್ಮತ್ವದರ್ಶನಂ ಪ್ರಶಂಸತಾ ಕಾಪಿಲಂ ಮತಂ ನಿಂದ್ಯತ ಇತಿ ಗಮ್ಯತೇ." ಕಪಿಲರು ವೇದವನ್ನು ಹಾಗೂ ವೇದಾನುಸಾರಿಯಾದ ಮನುವನ್ನು ತಿರಸ್ಕರಿಸುವುದರಿಂದ ತಾತ್ವಿಕ ನಿರೂಪಣೆಯಲ್ಲಿ ಮುಗ್ಗರಿಸಿದ್ದಾರೆಂಬುದು ಶಂಕರರ ಅಭಿಮತ. ಹೀಗೆನ್ನುವುದು ಆಶ್ಚರ್ಯಕರವಾಗಿದೆ. ಏಕೆಂದರೆ ಮನುವು ಒಬ್ಬ ತತ್ತ್ವಶಾಸ್ತ್ರಜ್ಞನೇ ಅಲ್ಲ. ಆದಾಗ್ಯೂ ಶಂಕರರ ಪ್ರಕಾರ ತತ್ತ್ವಶಾಸ್ತ್ರದ ಧೋರಣೆಯೊಂದರ ಮಾಪನಕ್ಕೆ ಧರ್ಮಶಾಸ್ತ್ರಕಾರ ಮನುವಿನ ಮಾತೇ ಅಂತಿಮ ಆಧಾರವಾಗಿದೆ !

ಹೀಗೆ ಶಂಕರರು ಧರ್ಮಶಾಸ್ತ್ರಕಾರರ ಮಾತುಗಳನ್ನು ತಮ್ಮ ವಾದಕ್ಕೆ ಆಧಾರವಾಗಿ ಉಲ್ಲೇಖಿಸುವ ಎಲ್ಲ ಪ್ರಸಂಗಗಳನ್ನೂ ಉದ್ಧರಿಸುವುದು ಅನವಶ್ಯಕ. ಮಹಾಮಹೋಪಾಧ್ಯಾಯ ಪಿ. ವಿ. ಕಾಣೆಯವರು ಹೇಳುವ ಮಾತನ್ನು ಗಮನಿಸಬಹುದು: "ವೇದಾಂತ ಭಾಷ್ಯದಲ್ಲಿ ಶಂಕರರು ಮನುವನ್ನು ಪದೇಪದೇ ಉದ್ಧರಿಸುತ್ತಾರೆ. ಬೃಹದಾರಣ್ಯಕಭಾಷ್ಯದಲ್ಲಿ ಹಲವು ಬಾರಿ ಮನುವಿನ ವಾಕ್ಯಗಳನ್ನು ಉದ್ಧರಿಸಲಾಗಿದೆ. ಶಂಕರರ ಪ್ರಕಾರ ವೇದಾಂತಸೂತ್ರದ ರಚನೆ ಮಾಡಿದವನು ಮನುಸ್ಮೃತಿಯನ್ನು ಒಂದು ಆಧಾರವನ್ನಾಗಿ ಇಟ್ಟುಕೊಂಡಿದ್ದಾನೆ."

ಶಂಕರರು ತುಚ್ಛೀಕರಿಸುವ ಬಗೆ :

ತತ್ತ್ವಶಾಸ್ತ್ರಜ್ಞನಿಗೂ ಧರ್ಮಶಾಸ್ತ್ರಕಾರನಿಗೂ ಇಂತಹ ಐಕ್ಯಸಂಬಂಧ ಹೇಗೆ ಉಂಟಾಗುತ್ತದೆ? ಇದು ಮುಖ್ಯವಾದ ಪ್ರಶ್ನೆ. ಮನು ಕೇವಲ ನಡತೆಯ ನಿಯಮಗಳನ್ನು ಸೂಚಿಸುವವನಾಗಿದ್ದರೂ ಅವನಿಗೆ ತತ್ತ್ವಶಾಸ್ತ್ರದಲ್ಲಿ ಆಸಕ್ತಿ ಇದೆ. ಇದು ಗೌಣವಾದ ಆಸಕ್ತಿ ಇರಬಹುದು. ಆದರೆ ಅದು ಅಪ್ರಕೃತವಲ್ಲ. ಅವನು ದೃಷ್ಟಿಯಲ್ಲಿರಿಸಿಕೊಂಡಿರುವ ಆದರ್ಶ ಸಮಾಜದ ಭದ್ರತೆಗಾಗಿ ತತ್ತ್ವಶಾಸ್ತ್ರದ ಯಾವುದೋ ಒಂದು ಧೋರಣೆಯು ಪೂರಕವೋ ಮಾರಕವೋ ಎಂಬುದು ಅವನ ಪ್ರಧಾನ ಆಸಕ್ತಿ. ಆದರೆ ಶಂಕರರು ಮೂಲತಃ ದಾರ್ಶನಿಕರು. "ಸತ್" ಎಂಬುದರ ಸರಿಯಾದ ಗ್ರಹಿಕೆಯೊಂದೇ ಅವರ ಆಸಕ್ತಿಯಾಗಿರಬೇಕು. ಹಾಗಿದ್ದರೆ ಮನುವಿಗೇಕೆ ಶರಣು ಹೋಗಬೇಕು? ಅದರ ಅಂತರಾರ್ಥವಾದರೂ ಏನು ?

ಅದ್ವೈತ ವೇದಾಂತದಂತಹ ದರ್ಶನವೊಂದರ ಬೆಂಬಲಕ್ಕೆ ಮನು ಹಾತೊರೆಯುವುದು ಸಹಜವೆನಿಸುತ್ತದೆ; ಏಕೆಂದರೆ ಅವನು ಅಪೇಕ್ಷಿಸುವ ಸಾಮಾಜಿಕ ಕಟ್ಟಲೆಗೆ ಇಂತಹ ತತ್ತ್ವವು ಸೈದ್ಧಾಂತಿಕ ಸಾರವು ನೀಡುತ್ತದೆ. ಅಂದರೆ, ಮನುವಿನ ಸಮಾಜಶಾಸ್ತ್ರಕ್ಕೆ ಶಂಕರರ ಬೆಂಬಲವಿದೆಯೆಂದು ಗ್ರಹಿಸೋಣವೆ? ಅವರ ತಾತ್ವಿಕ ಧೋರಣೆಗೆ ಯಶಸು ಬಹುಶಃ ಮನುವಿನ ಆದರ್ಶ ಸಮಾಜದಲ್ಲಿ ಮಾತ್ರ ಸಾಧ್ಯವೆಂದು ಅವರಿಗೆ ಅನ್ನಿಸಿರಬೇಕು.

ಶಂಕರಾಚಾರ್ಯರ ನಮ್ಮ ಸಮಕಾಲೀನ ಅಭಿಮಾನಿಗಳಿಗೆ ಇಂತಹ ಪ್ರಶ್ನೆ ರುಚಿಸುವುದಿಲ್ಲ. ಹಾಗೆ ಪ್ರಶ್ನೆ ಎತ್ತುವವರು ಅವರ ಪ್ರಕಾರ ಧರ್ಮದಲ್ಲಿ ಶ್ರದ್ಧೆ ಇಲ್ಲದವರು. ಆದರೆ ಪ್ರಶ್ನೆ ಅನಿವಾರ್ಯ. ಏಕೆಂದರೆ ಶಂಕರರಿಗೂ ಒಂದು ರೀತಿಯ ಸಮಾಜಶಾಸ್ತ್ರದಲ್ಲಿ ಶ್ರದ್ಧೆಯಿದೆ. ಅದರಲ್ಲಿ ಮನುವಿನಲ್ಲಿರುವ ತುಚ್ಛಭಾವನೆಯ ಛಾಯೆ ಇದೆ, ಒಂದು ವರ್ಗದವರ ಬಗ್ಗೆ ಕೇವಲ ನಿಕೃಷ್ಟ ಭಾವನೆ ಇದೆ.

ಶಂಕರರ ಮಹತ್ವದ ಕೃತಿಯ ಹೊರಗೆ ಅವರ ಸಮಾಜಶಾಸ್ತ್ರದ ಚಿಂತನೆಯನ್ನು ನಾವು ಹುಡುಕಬೇಕಾಗಿಲ್ಲ. ಬ್ರಹ್ಮಸೂತ್ರಭಾಷ್ಯದಲ್ಲೇ ಅವರು ತಮ್ಮ ದಾರ್ಶನಿಕ ಮತ್ತು ಸಮಾಜಶಾಸ್ತ್ರೀಯ ಧೋರಣೆಗಳಿಗೆ ಪ್ರಬಲವಾದ ಅಭಿವ್ಯಕ್ತಿ ನೀಡಿದ್ದಾರೆ. ಆದ್ದರಿಂದ ದರ್ಶನ ಮತ್ತು ಸಮಾಜಶಾಸ್ತ್ರಗಳನ್ನು ಬೇರ್ಪಡಿಸುವುದು ಶಂಕರರ ಉದ್ದೇಶವಲ್ಲ. ಅವೆರಡಕ್ಕೂ ಪರಸ್ಪರ ಹೊಂದಿಕೆಯ ಸಂಬಂಧವಿದೆ. ಅವರ ಸಮಾಜಶಾಸ್ತ್ರದ ಧೋರಣೆಗೆ ಮೂಲ ನಮ್ಮ ಧರ್ಮಶಾಸ್ತ್ರಗ್ರಂಥಗಳು. ಅವುಗಳ ದೃಷ್ಟಿಯಲ್ಲಿ ಸಮಾಜವು ಎರಡು ಬಣಗಳನ್ನು ಹೊಂದಿದೆ. ಅವು ಯಾವುವೆಂದರೆ ದ್ವಿಜರು ಮತ್ತು ಶೂದ್ರರು. ಶಂಕರರು ತಮ್ಮೆಲ್ಲ ಕೃತಿಗಳಲ್ಲೂ ಒಪ್ಪುವ ಒಂದು ಮಾತು ದ್ವಿಜರು ಸಹಜವಾಗಿಯೇ ಶೂದ್ರರಿಗಿಂತ ಶ್ರೇಷ್ಠರು ಎಂಬುದು. ಶೂದ್ರರ ಬಗೆಗಿನ ಅವರ ಅಭಿಪ್ರಾಯಗಳನ್ನು ನಾವು ವಿಶೇಷವಾಗಿ ಗಮನಿಸಬೇಕು. ಬ್ರಹ್ಮಸೂತ್ರಭಾಷ್ಯದ ಒಂದು ಇಡೀ ಭಾಗವನ್ನು ಇದರ ವಿವರಣೆಗೆ ಅವರು ಮೀಸಲಾಗಿಟ್ಟಿದ್ದಾರೆ.

ಅದರ ಮುಖ್ಯವಾದ ಇಂಗಿತ ಇದು; ಶಂಕರರು ಯಾವುದನ್ನು ದಾರ್ಶನಿಕ ದೃಷ್ಟಿ ಎಂದು ಪರಿಗಣಿಸುತ್ತಾರೋ ಅದನ್ನು ಹೊಂದಲು ಶೂದ್ರನು ಯೋಗ್ಯನಲ್ಲ. ಇದು ಅಷ್ಟೇನೂ ಗಮನಾರ್ಹವಾದ ಅಂಶವೆನಿಸದೆ ಹೋಗಬಹುದು. ಆದರೆ ಅದರ ಪರಿಣಾಮ ಹಾಗಲ್ಲ. ಅದು ಅತ್ಯಂತ ಗಂಭೀರವಾದುದು, ಘೋರವಾದುದು. ಶಂಕರರ ಪ್ರಕಾರ ಈ ದಾರ್ಶನಿಕ ದೃಷ್ಟಿಯಿಂದ ಮಾತ್ರವೇ ನಿಜವಾದ ಮುಕ್ತಿಯ ಸಾಧನೆ ಸಾಧ್ಯ. ಶೂದ್ರನಿಗೆ ಆ ದೃಷ್ಟಿಯನ್ನು ನಿರಾಕರಿಸುವುದೆಂದರೆ ಅವನಿಗೆ ಮೋಕ್ಷಪ್ರಾಪ್ತಿಯ ನಿರಾಕರಣೆಯೂ ಆಗುತ್ತದೆ. ಅಂದರೆ, ಅವನು ಸದಾ ಸಂಕೋಲೆಯಲ್ಲಿ ಅಥವಾ ಬಂಧನದಲ್ಲಿ ಉಳಿಯಬೇಕು. ಹೀಗೆ ನಿರಂತರವಾಗಿ ಬಂಧನದಲ್ಲಿದ್ದುಕೊಂಡು ಅವನು ದ್ವಿಜರ ಸೇವೆ ಮಾಡಬೇಕು. ಮನು ಮೊದಲೇ ಹೇಳಿದ್ದಂತೆ "ದ್ವಿಜರ ಸೇವೆಯನ್ನು ಮಾಡುವುದು ಬಿಟ್ಟು ಶೂದ್ರನು ಬೇರೇನು ಮಾಡಿದರೂ ಅದು ನಿರರ್ಥಕವಾಗುತ್ತದೆ".

ಸಂಗ್ರಹಾನುವಾದ : **ಡಾ|| ಜಿ. ರಾಮಕೃಷ್ಣ**

ಶೂದ್ರರಿಗೆ ದಾರ್ಶನಿಕ ಜ್ಞಾನದ ಹಕ್ಕು ಏಕಿಲ್ಲ? ಬ್ರಹ್ಮಸೂತ್ರ 1-3-34ರ ಮೇಲಿನ ಭಾಷ್ಯದಲ್ಲಿ

ಶಂಕರರು ನೀಡಿರುವ ಉತ್ತರ ಇದು: "ಶೂದ್ರರಿಗೆ ಅಂತಹ ಯಾವ ಹಕ್ಕೂ ಇಲ್ಲ; ಏಕೆಂದರೆ ಅವರು ವೇದಾಧ್ಯಯನ ಮಾಡುವಂತಿಲ್ಲ. ವೇದವನ್ನೋದಿ ಅದನ್ನು ಅರ್ಥಮಾಡಿಕೊಂಡಿರುವವನಿಗೆ ವೇದಾರ್ಥದಲ್ಲಿ ಪ್ರವೇಶವಿರುತ್ತದೆ. ವೇದಾಧ್ಯಯನಕ್ಕೆ ಪೂರ್ವಭಾವಿಯಾಗಿ ಉಪನಯನಕ್ಕೂ ಶೂದ್ರನು ಅರ್ಹನಲ್ಲವಾದ್ದರಿಂದ ಅವನಿಗೆ ವೇದಾಧ್ಯಯನವೆಲ್ಲಿಯದು? ಅದು ದ್ವಿಜರಿಗೆ ಮಾತ್ರ ಸೇರಿದೆ."

ಇದು ತತ್ತ್ವಶಾಸ್ತ್ರೀಯ ವಾದಕ್ಕಿಂತ ಹೆಚ್ಚಾಗಿ ಕೇವಲ ಹೇಳಿಕೆಗಳ ಸರಮಾಲೆಯಂತೆ ತೋರಬಹುದು. ಆದರೆ ಶಂಕರರಿಗೆ ಹಾಗೆನಿಸುವುದಿಲ್ಲ. ಏಕೆಂದರೆ ಧರ್ಮಶಾಸ್ತ್ರಕಾರರು ಹೇಳಿದ್ದಾರೆಂದರೆ ಅದು ಅವರಿಗೆ ಅಬಾಧಿತ ಸತ್ಯವಾಗಿ ಕಾಣುತ್ತದೆ. ಅವರೇ ಬ್ರಹ್ಮಸೂತ್ರ 1–3–36ರ ಭಾಷ್ಯದಲ್ಲಿ ಹೇಳುವಂತೆ "ಶೂದ್ರರಿಗೆ ಸಂಸ್ಕಾರಗಳು ಇಲ್ಲವೆಂಬುದನ್ನು ಪದೇಪದೇ ಹೇಳಲಾಗಿದೆ. ಮನು (10–4) ಅವರನ್ನು ಏಕಜಾತಿಯವರೆನ್ನುತ್ತಾನೆ. (ಅಂದರೆ ಅವರು ದ್ವಿಜರಲ್ಲ ಎಂದರ್ಥ). ಇನ್ನೊಂದೆಡೆ ಮನು ಹೇಳಿರುವುದು 'ನ ಶೂದ್ರೇ ಪಾತಕಂ ಕಿಂಚಿನ್ನ ಚ ಸಂಸ್ಕಾರಮರ್ಹತಿ', ಎಂದು".

ಇಷ್ಟೇ ಅಲ್ಲ. ಶಂಕರರು ಮುಂದುವರಿದು ಇನ್ನೂ ಹೇಳುತ್ತಾರೆ: "ಸ್ಮೃತಿಯಲ್ಲಿ ಶೂದ್ರನಿಗೆ ವೇದಾಧ್ಯಯನವಿರಲಿ, ವೇದ ಶ್ರವಣವೂ ಕೂಡದೆಂದು ಹೇಳಿದೆ. ಆದ್ದರಿಂದ ವೇದಾರ್ಥ ಮತ್ತು ವೈದಿಕ ಕ್ರಿಯೆಗಳು ಅವರಿಗೆ ನಿಷಿದ್ಧ. ಅವರಿಗೆ ವೇದಶ್ರವಣ ಸಲ್ಲದೆಂದು ಕೆಳಗಿನ ವಾಕ್ಯಗಳಲ್ಲಿ ಹೇಳಿದೆ. –'ವೇದಶ್ರವಣ ಮಾಡುವ ಶೂದ್ರನ ಕಿವಿಗೆ ಕರಗಿಸಿದ ಸೀಸ ಮತ್ತು ಅರಗು ತುಂಬಬೇಕು' (ಗೌತಮ ಧರ್ಮಸೂತ್ರ 2–3–4). 'ಶೂದ್ರನು ಸ್ಮಶಾನಸದೃಶನಾದವನು, ಆದ್ದರಿಂದ ಶೂದ್ರನ ಸನಿಹದಲ್ಲಿ ವೇದ ಓದಬಾರದು. ಇದರಿಂದ ಶೂದ್ರನು ವೇದಾಧಿಕಾರ ಹೊಂದಿಲ್ಲವೆಂಬುದು ಸ್ಪಷ್ಟವಿದೆ. ಅವನ ಸನಿಹದಲ್ಲಿ ವೇದ ಓದಬಾರದೆಂದ ಮೇಲೆ ಇನ್ನು ಅವನೇ ವೇದ ಓದಲು ಹೇಗೆ ತಾನೆ ಶಕ್ಯ? ಅವನು ವೇದಾಧ್ಯಯನ ಮಾಡಕೂಡದೆಂಬ ಸ್ಪಷ್ಟವಾದ ವಿಧಿವಾಕ್ಯವೂ ಇದೆ. 'ವೇದೋಚ್ಚಾರಣೇ ಜಿಹ್ವಾಚ್ಛೇದೋ ಧಾರಣೇ ಶರೀರಭೇದ ಇತಿ.' (ಅವನು ವೇದವನ್ನು ಉಚ್ಚರಿಸಿದರೆ ಅವನ ನಾಲಿಗೆ ಕತ್ತರಿಸಬೇಕು; ವೇದವನ್ನು ಧಾರಣ ಮಾಡಿದರೆ, ಅರ್ಥಾತ್ ಮೈಗೂಡಿಸಿಕೊಂಡರೆ, ಅವನ ಶರೀರವನ್ನು ಕತ್ತರಿಸಬೇಕು). ವೇದಶ್ರವಣ ಮತ್ತು ವೇದಾಧ್ಯಯನದ ನಿಷೇಧವು ವೈದಿಕ ಕ್ರಿಯೆಗಳ ನಿಷೇಧವೂ ಆಗಿರುತ್ತದೆ. ಅದಕ್ಕೂ ಸ್ಪಷ್ಟವಾದ ವಿಧಿವಾಕ್ಯಗಳಿವೆ. ಉದಾಹರಣೆಗೆ. 'ನ ಶೂದ್ರಾಯ ಮತಿಂ ದದ್ಯಾತ್' (ಶೂದ್ರನಿಗೆ ಜ್ಞಾನ ಕೊಡಕೂಡದು; ಮನು 4–80) ಮತ್ತು 'ದ್ವಿಜಾತೀನಾಂ ಅಧ್ಯಯನಮಿಜ್ಯಾ ದಾನಮ್' (ಅಧ್ಯಯನ ಯಜ್ಞಕ್ರಿಯೆ ಹಾಗೂ ದಾನಸ್ವೀಕಾರ ದ್ವಿಜರಿಗೆ ಸೇರಿದ್ದು; ಗೌತಮ ಧರ್ಮಸೂತ್ರ 2–1–1)".

ಕಟ್ಟಾ ಅನಾಗರಿಕತೆಗೆ ಅಥವಾ ಬರ್ಬರತೆಗೆ ಶಂಕರರು ಉದ್ಧರಿಸಿರುವ ವಾಕ್ಯಗಳು ಪ್ರಾಚೀನ ಗ್ರೀಸ್ ಮತ್ತು ರೋಮ್‌ಗಳಲ್ಲಿನ ಗುಲಾಮಿ ಪದ್ಧತಿಯ ಪರವಾದ ಮಾತುಗಳಿಗಿಂತ ಹೆಚ್ಚು ಘೋರವಾಗಿವೆ. ಶಂಕರರ ಕೆಲವು ಆಧುನಿಕ ಅಭಿಮಾನಿಗಳು ಶಾಂಕರ ವೇದಾಂತದ ಮಾನವೀಯತೆಯ ಬಗ್ಗೆ ಉದ್ದುದ್ದದ ಲೇಖನಗಳನ್ನು ಬರೆಯುವುದರಿಂದ ಆಶ್ಚರ್ಯವೆನಿಸುತ್ತದೆ. ಸ್ವತಃ ಶಂಕರರೇ ಈ ಅಮಾನವೀಯ ನಿಯಮಗಳನ್ನು ಹುರುಪಿನಿಂದ ಉದ್ಧರಿಸಿರುವಾಗ ಲಕ್ಷೋಪಲಕ್ಷ ಶ್ರಮಜೀವಿಗಳ ಬಗ್ಗೆ ಅವರ ಅಸಹ್ಯವಾದ ನಿಲುವು ಗೋಚರವಾಗುವುದಿಲ್ಲವೆ?

ಇನ್ನು ಕೆಲವು ಆಧುನಿಕ ಶಂಕರಾಭಿಮಾನಿಗಳು ಅವರನ್ನು ಪ್ಲೇಟೋವಿನೊಡನೆ ಹೋಲಿಸುವುದರಲ್ಲಿ ಆಸಕ್ತಿ ತೋರುತ್ತಾರೆ. ಹೋಲಿಕೆಯೇನೋ ಖಂಡಿತವಾಗಿಯೂ ಸಾಕಷ್ಟಿದೆ; ಏಕೆಂದರೆ ಇಬ್ಬರೂ ಪ್ರಕೃತಿಯ ಸತ್ಯವನ್ನು ಅಲ್ಲಗಳೆದು ವಿಜ್ಞಾನದ ಬೆಳವಣಿಗೆಗೆ ಸೈದ್ಧಾಂತಿಕವಾದ ಅಡಚಣೆಯನ್ನು ಬಲವಾಗಿ ಒಡ್ಡುತ್ತಾರೆ. ಆದರೆ ಹೋಲಿಕೆ ಅಲ್ಲಿಗೇ ಮುಗಿಯುವುದಿಲ್ಲ. ಇಬ್ಬರ ಸಮಾಜ ಶಾಸ್ತ್ರೀಯ ದೃಷ್ಟಿಯಲ್ಲೂ ಬೇಕಾದಷ್ಟು ಸಮಾನಾಂಶಗಳಿವೆ. ಶಂಕರರು ಶ್ರಮಿಕಜೀವಿಗಳನ್ನು ಶೂದ್ರರೆಂದು ಗುರುತಿಸಿದ್ದರೆ ಪ್ಲೇಟೋ ಅವರನ್ನು ಗುಲಾಮರೆಂದು ಗುರುತಿಸಿದ್ದಾನೆ. ಅವರನ್ನು ಅತೀವ ನಿಕೃಷ್ಟರೆಂದು ಇಬ್ಬರೂ ಸಾಮಾನ್ಯವಾಗಿ ಬಣ್ಣಿಸಿದ್ದಾರೆ. ಫ್ಯಾರಿಂಗ್‌ಟನ್ ತನ್ನ "ಗ್ರೀಕ್ ಸೈನ್ಸ್" ಎಂಬ ಪುಸ್ತಕದಲ್ಲಿ (I-142) ಹೇಳುವಂತೆ, "ಗುಲಾಮಗಿರಿಯನ್ನು ಕುರಿತ ಉತ್ತರದ ಸಿದ್ಧಾಂತದಲ್ಲಿ ಗುಲಾಮನನ್ನು ಒಬ್ಬ ತರ್ಕಬುದ್ಧಿ ಇರುವ ಮನುಷ್ಯನೆಂದು ಗುರುತಿಸುವುದೇ ಇಲ್ಲ.

ಯಜಮಾನನಿಗೆ ಮಾತ್ರ ತಾರ್ಕಿಕಮತಿ ಇತ್ತು. ಅವನ ನಿರ್ದೇಶನವನ್ನು ಚಾಚೂ ತಪ್ಪದೆ ಪಾಲಿಸಿದಾಗ ಗುಲಾಮನಲ್ಲೂ ಸ್ವಲ್ಪಮಟ್ಟಿನ 'ನೈಜ ಅಭಿಪ್ರಾಯ' ಮೂಡಬಹುದಿತ್ತು, ಅಷ್ಟೆ. ಇಂತಹ ಯಜಮಾನ–ಗುಲಾಮ ಸಂಬಂಧವು ಪ್ರತಿಯೊಂದು ಕ್ಷೇತ್ರದಲ್ಲೂ ಪ್ಲೇಟೋವಿಗೆ ಮೂಲಭೂತವಾದ ಸಂಬಂಧವೇ ಆಗಿದ್ದಿತು,"

ಈ ಇಬ್ಬರು ತತ್ವಜ್ಞಾನಿಗಳ ಧೋರಣೆಗಳಿಂದ ನಮಗೆ ಸ್ಪಷ್ಟವಾಗುವ ಅಂಶವೇನೆಂದರೆ ಭೌತ ಪ್ರಪಂಚವನ್ನು ಸೈದ್ಧಾಂತಿಕವಾಗಿ ಅಲ್ಲಗಳೆಯುವುದಕ್ಕೂ ಶ್ರಮಜೀವಿಗಳನ್ನು ಸಾಮಾಜಿಕವಾಗಿ ನಿಕೃಷ್ಟವಾಗಿ ಕಾಣುವುದಕ್ಕೂ ಸಂಬಂಧವಿದೆ ಎಂಬುದು, ವರ್ಗಪ್ರಜ್ಞೆಯುಳ್ಳ ಆಧುನಿಕ ವಿಶ್ವದ ಶ್ರಮಿಕ ವರ್ಗವು ಇಂತಹ ದಾರ್ಶನಿಕ ದೃಷ್ಟಿಯನ್ನು ನುಚ್ಚುನೂರು ಮಾಡುತ್ತದೆಯೆಂಬುದೊಂದು ಚಾರಿತ್ರಿಕ ಸತ್ಯ. ಮಾನವನ ವಿಮೋಚನೆಯನ್ನು ಕುರಿತಂತೆ ವಿಶ್ಲೇಷಣೆ ನೀಡುತ್ತಾ ಬಹಳ ಹಿಂದೆಯೇ ಮಾರ್ಕ್ಸ್ ನುಡಿದಿದ್ದುದು ಇದು; "ಈ ವಿಮೋಚನೆಗೆ ಶಿರಸ್ಸು ತತ್ತ್ವಶಾಸ್ತ್ರವಾದರೆ, ಶ್ರಮಿಕ ವರ್ಗವು ಅದರ ಹೃದಯ. ಶ್ರಮಿಕವರ್ಗವು ಶೋಷಣೆಗೆ ಗುರಿಯಾಗಿರುವವರೆಗೂ ತತ್ತ್ವಶಾಸ್ತ್ರವು ತನ್ನ ನಿಜಾವಸ್ಥೆಯನ್ನು ತಾಳಲಾರದು ಮತ್ತು ತತ್ತ್ವಶಾಸ್ತ್ರವು ನೈಜವಾದ ರೀತಿಯಲ್ಲಿ ಅಸ್ತಿತ್ವಕ್ಕೆ ಬರುವವರೆಗೂ ಶ್ರಮಿಕವರ್ಗದ ವಿಮುಕ್ತಿ ಸಾಧ್ಯವಾಗಲಾರದು."

ಶೂದ್ರನ ಬವಣೆ :

ನಾವೀಗ ಶಂಕರರಲ್ಲಿಗೆ ಹಿಂದಿರುಗೋಣ. ಶೂದ್ರರನ್ನು ಚಲಿಸುವ ಸ್ಮಶಾನವೆಂದು ಖಂಡಿಸಿದ್ದು ಸಾಲದೆಂಬಂತೆ ಮುಂದುವರಿದು ಅವರು ಪ್ರತಿಪಾದಿಸುವುದೇನೆಂದರೆ 'ಶೂದ್ರ' ಎಂಬ ಪದದ ಮೂಲಾರ್ಥವೇ 'ಬವಣೆ' ಎಂದಾಗಿದೆಯೆಂಬುದನ್ನು, 'ಶೂದ್ರ' ಎಂದರೆ ಬವಣೆ; ಆದ್ದರಿಂದ ಬವಣೆಗೆ ಗುರಿಯಾದವನನ್ನು ಆಲಂಕಾರಿಕವಾಗಿ ಶೂದ್ರನೆಂದು ಕರೆಯುವುದು ವಾಡಿಕೆ. ಹೀಗೆ ಅವರು ಪ್ರತಿಪಾದಿಸುವುದು ಛಾಂದೋಗ್ಯ ಉಪನಿಷತ್ತಿನ ನಾಲ್ಕನೆಯ ಅಧ್ಯಾಯದಲ್ಲಿ ಬರುವ ಒಂದು ಕತೆಯ ಸಂದರ್ಭದಲ್ಲಿ. ಕತೆ ಸ್ಥೂಲವಾಗಿ ಹೀಗಿದೆ:

ಜಾನಶ್ರುತಿ ಪೌತ್ರಾಯಣನೆಂಬೊಬ್ಬ ಶ್ರೀಮಂತನಿದ್ದ. ಅವನು ದಾನಶೂರನಾಗಿದ್ದ. ಅದು ಅವನಿಗೆ ಹೆಮ್ಮೆಯ ವಿಷಯವೂ ಆಗಿತ್ತು. ಒಂದು ರಾತ್ರಿ ಕೆಲವು ಪಕ್ಷಿಗಳು ಹಾರುತ್ತಾ ಅವನನ್ನು ರೈಕ್ವನಿಗಿಂತಲೂ ಕಡಿಮೆಯಾದವನೆಂದು ತಮ್ಮತಮ್ಮಲ್ಲೇ ಚರ್ಚಿಸುತ್ತಿದ್ದುವು. ರೈಕ್ವನೆಂಬುವನು ಒಂದು ಗಾಡಿಯ ಬಳಿ ಇರುತ್ತಿದ್ದ ತತ್ತ್ವಜ್ಞಾನಿ. ಅವನನ್ನು ಹುಡುಕಲು ಜಾನಶ್ರುತಿ ತನ್ನ ಸೇವಕರನ್ನು ಅಟ್ಟಿದ. ಅಲ್ಲಿ ಇಲ್ಲಿ ಹುಡುಕಿ ಕಡೆಗೆ ಸೇವಕ ರೈಕ್ವನನ್ನು ಪತ್ತೆ ಮಾಡಿದ. ತನ್ನ ಗಾಡಿಯ ಅಡಿಯಲ್ಲಿ ಕೂತು ಮೈ ತುರುಸಿಕೊಳ್ಳುತ್ತಿದ್ದ ಆ ರೈಕ್ವ. ನಂತರ ಜಾನಶ್ರುತಿಯೇ ಅವನ ಬಳಿಗೆ ಬಂದ. ಆರುನೂರು ಗೋವು, ಒಂದು ಚಿನ್ನದ ಸರ ಮತ್ತು ಒಂದು ರಥವನ್ನು ಕೊಡುವುದಾಗಿ ಹೇಳಿ ಆ ತತ್ತ್ವಜ್ಞಾನಿಯ ರಹಸ್ಯ ಜ್ಞಾನಕ್ಕಾಗಿ ಬೇಡಿದ. ಗಾಡಿಯ ರೈಕ್ವ ಸಿಟ್ಟಿನಿಂದಲೇ ನಿರಾಕರಿಸಿದ. ಜಾನಶ್ರುತಿ ಒಂದು ಸಾವಿರ ಗೋವು, ಚಿನ್ನದ ಸರ, ರಥ ಹಾಗೂ ರೈಕ್ವನು ವಾಸಿಸುತ್ತಿದ್ದ ಊರು ಮತ್ತು ಸ್ವತಃ ತನ್ನ ಮಗಳನ್ನು ಸಹ ಕೊಡುವುದಾಗಿ ಹೇಳಿ ಜ್ಞಾನಭಿಕ್ಷೆಗೆ ಯಾಚಿಸಿದ. ಆ ಯುವತಿಯ ಸ್ಫುರದ್ರೂಪ ತತ್ತ್ವಜ್ಞಾನಿಯ ಮನಸ್ಸನ್ನು ಕರಗಿಸಿತು ಮತ್ತು ದಾನಿಗೆ ರಹಸ್ಯಜ್ಞಾನ ಉಪದೇಶಿಸಲು ರೈಕ್ವ ಒಪ್ಪಿಗೆ ನೀಡಿದ. ಉಪನಿಷತ್ತು ಹೇಳುವಂತೆ "ತಸ್ಯಾ ಹ ಮುಖಮುಪೋದ್ಗೃಹ್ಣನ್ನುವಾಚ ಆಜಹಾರೇಮಾ. ಶೂದ್ರಾನೇನೈವ ಮುಖೇನಾಲಾಪಯಿಷ್ಯಥಾ" (ಅವಳ ಮುಖವನ್ನು ತನ್ನೆಡೆಗೆ ತಿರುಗಿಸಿಕೊಂಡು ರೈಕ್ವ ಹೇಳಿದ: 'ಇಂತಹ ಒಳ್ಳೆಯ ವಸ್ತುವನ್ನು ದಾನಮಾಡಲು ತಂದಿದ್ದಾನಲ್ಲವೆ! ಶೂದ್ರ, ಈ ಮುಖವೊಂದೇ ಸಾಕು ನನ್ನನ್ನು ಮಾತನಾಡುವಂತೆ ಮಾಡಲು,).

ಇದು ಸ್ವಾರಸ್ಯವಾಗಿದೆಯಲ್ಲವೆ? ಉಪನಿಷತ್ತಿನ ಒಬ್ಬ ಧೀಮಂತ, ಗಾಡಿಯ ಅಡಿಯಲ್ಲಿ ಕುಳಿತು ಮೈ ತುರುಸಿಕೊಳ್ಳುವವ; ಆದರೆ ಒಬ್ಬ ಯುವತಿಯನ್ನು ಕೊಟ್ಟರೆ ರಹಸ್ಯಜ್ಞಾನ ಉಪದೇಶಿಸಲು ಮುಂದಾಗುತ್ತಾನೆ ! ಶಂಕರರಿಗೆ ಇದನ್ನು ಗಮನಿಸುವ ಆತುರವಿಲ್ಲ. ಅವರ ಖೇದಕ್ಕೆ ಬೇರೆಯೇ ಕಾರಣವಿದೆ. ಜಾನಶ್ರುತಿಯನ್ನು 'ಶೂದ್ರ' ನೆಂದು ಸಂಬೋಧಿಸಿರುವುದು ಅದು. ಜಾನಶ್ರುತಿಯು ಶೂದ್ರನಾಗಿದ್ದರೆ ಅವನಿಗೆ ಉಪನಿಷತ್ತಿನ ರಹಸ್ಯಜ್ಞಾನದ ಉಪದೇಶವು ಅಪರಾಧವಲ್ಲವೆ! ಇದು ಹೇಗೆ ತಾನೆ ಸಾಧ್ಯ? ಶೂದ್ರರಿಗೆ ಜ್ಞಾನದ ಅಧಿಕಾರ

ಇಲ್ಲವೆಂಬ ಅವರ ಅಭಿಪ್ರಾಯವನ್ನು ಉಪನಿಷತ್ತುಗಳೇ ತಿರಸ್ಕರಿಸಿದರೆ ಹೇಗೆ ? ಇದಕ್ಕಿಂತಲೂ ನಿಂದ್ಯವಾದದ್ದು ಶಂಕರರ ಪ್ರಕಾರ ಇನ್ನೇನೂ ಇರಲಾರದು. ಆದ್ದರಿಂದ ಅವರು ಮಾಡುವ ಚಮತ್ಕಾರವೇನೆಂದರೆ ಈ ಸಂದರ್ಭದಲ್ಲಿ ಪ್ರಯೋಗಕ್ಕೆ ಬಂದಿರುವ 'ಶೂದ್ರ' ಎಂಬ ಪದಕ್ಕೆ ಬೇರೆಯೇ ಅರ್ಥವಿದೆಯೆಂದು ಸಾಧಿಸುವುದು. ಆ ಪದವು ಆಲಂಕಾರಿಕವಾಗಿ ಇಲ್ಲಿ 'ನೊಂದವನು' ಎಂಬರ್ಥ ಹೊಂದಿದೆಯಂತೆ. ಅದೇ 'ಶೂದ್ರ' ಎಂಬ ಪದದ ವ್ಯುತ್ಪತ್ತಿ ಅರ್ಥವೆಂದು ಅವರು ನಿರೂಪಿಸುತ್ತಾರೆ.

ಅಪಶೂದ್ರಾಧಿಕರಣವೆಂದು ಕರೆಯಲಾಗಿರುವ ಬ್ರಹ್ಮಸೂತ್ರದ ಈ ಭಾಗದಲ್ಲಿ ಸೂತ್ರ (1–3–34) ಹೀಗಿದೆ: 'ಶುಗಸ್ಯ ತದನಾದರ ಶ್ರವಣಾತ್ತದಾದ್ರವಣಾತ್ ಸೂಚ್ಯತೇ ಹಿ.' ಇದರ ಮೇಲಿನ ಶಂಕರರ ಭಾಷ್ಯ ಭಾಗಶಃ ಇದು: ಶಕ್ಯತೇ ಚಾಯಂ ಶೂದ್ರಶಬ್ದಃ ಅಧಿಕೃತ ವಿಷಯೋ ಯೋಜಯಿತುಮ್ । ಕಥಮಿತ್ಯುಚ್ಯತೇ– 'ಕಂವರ ಏನಮೇತತ್ಸಂತಂ ಸಯುಗ್ವಾನಮಿವ ರೈಕ್ವಮಾತ್ಥ' (ಛಾಂದೋಗ್ಯ 4–1–3) ಇತ್ಯಸ್ಮಾತ್ ಹಂಸವಾಕ್ಯಾತ್ ಆತ್ಮನೋ ಅನಾದರಂ ಶ್ರುತವತೋ ಜ್ಞಾನಶ್ರುತೇಃ ಪೌತ್ರಾಯಣಸ್ಯ ಶುಗುತ್ಪೇದೇ, ತಾಮೃಷೀ ರೈಕ್ವಃ ಶೂದ್ರಶಬ್ದೇನಾನೇನ ಸೂಚಯಾಂಬಭೂವಾ–ತ್ಮನಃ 'ಪರೋಕ್ಷಜ್ಞತಾಖ್ಯಾಪನಾಯ ಇತಿ ಗಮ್ಯತೇ । ಜಾತಿಶೂದ್ರಸ್ಯ ಅನಧಿಕಾರಾತ್ । ಕಥಂ ಪುನಃ ಶೂದ್ರ ಶಬ್ದೇನ ಶುಗುತ್ಪನ್ನಾ ಸೂಚ್ಯತ ಇತಿ? ಉಚ್ಯತೇ–– ತದಾದ್ರವಣಾತ್ । ಶುಚಮಭಿದುದ್ರಾವ, ಶುಚಾ ವಾ ಅಭಿದುದ್ರುವೇ, ಶುಚಾ ವಾ ರೈಕ್ವಮಭಿದುದ್ರಾವ ಇತಿ ಶೂದ್ರಃ । ಅವಯವಾರ್ಥಸಂಭವಾತ್ ರೂಢ್ಯರ್ಥಸ್ಯ ಚ ಅಸಂಭವಾತ್ । ದೃಶ್ಯತೇ ಚಾಯಮರ್ಥಃ ಅಸ್ಯಾ–ಮಾಖ್ಯಾಯಿಕಾಯಾಂ॥ (ಶೂದ್ರ ಶಬ್ದವು ಅದು ಬಂದಿರುವ ಸಂದರ್ಭದಲ್ಲಿ ಬೇರೊಂದು ರೀತಿಯಲ್ಲಿ ಯೋಜಿತಗೊಳ್ಳಬಹುದು. ಹೇಗೆ? ಜಾನಶ್ರುತಿ ಪೌತ್ರಾಯಣನು ತನ್ನ ಬಗ್ಗೆ ಪಕ್ಷಿಗಳು ಅನಾದರದಿಂದ ಮಾತನಾಡಿಕೊಳ್ಳುತ್ತಿದ್ದುದನ್ನು ಕೇಳಿ ತನ್ನೊಳಗೆ ಬಹುವಾಗಿ ನೊಂದುಕೊಂಡ. 'ಶುಕ್' ಎಂದರೆ 'ಶೋಕ; ಅರ್ಥಾತ್, ಅವನು ಶೋಕಗೊಂಡ. ಹೀಗೆ ನೊಂದುಕೊಂಡಿದ್ದುದನ್ನು ಗಮನದಲ್ಲಿರಿಸಿ ರೈಕ್ವನು ಅವನನ್ನು ಶೂದ್ರಶಬ್ದದಿಂದ ಸಂಬೋಧಿಸಿದ. ತನಗೆ ಪರೋಕ್ಷಜ್ಞಾನದ ಸಾಕ್ಷಾತ್ಕಾರವಾಗಿದೆಯೆಂಬುದನ್ನೂ ಇದರಿಂದ ಅವನು ಸೂಚಿಸಿದ. ಅಂದರೆ, ಅವನಿಲ್ಲದ ಕಡೆ ಪಕ್ಷಿಗಳು ಮಾತನಾಡಿಕೊಂಡಿದ್ದು, ಅದರಿಂದ ಜಾನಶ್ರುತಿ ನೊಂದುಕೊಂಡದ್ದು, ಎಲ್ಲಾ ರೈಕ್ವನಿಗೆ ತಾನಿದ್ದಲ್ಲಿಂದಲೇ ಗೊತ್ತಾಗಿಬಿಟ್ಟಿತ್ತು, ಈ ಅನ್ವಯಾರ್ಥವನ್ನು ನಾವು ಸ್ವೀಕರಿಸಬೇಕು. ಏಕೆಂದರೆ, ಜಾತಿಯಲ್ಲಿ ಶೂದ್ರನಾದವನಿಗೆ ಉಪನಿಷತ್ತಿನ ಜ್ಞಾನ ಬೋಧ್ಯವಲ್ಲ. ಜಾನಶ್ರುತಿಯು ನೊಂದುಕೊಂಡಿದ್ದುದನ್ನು ಶೂದ್ರ ಶಬ್ದದಿಂದ ಹೇಗೆ ಸೂಚಿಸಲು ಸಾಧ್ಯವೆಂಬ ಪ್ರಶ್ನೆ ಏಳಬಹುದು. ಅದಕ್ಕೆ ನಮ್ಮ ಸಮಾಧಾನ ಇದು: ನೊಂದುಕೊಳ್ಳುವಿಕೆಯು ಉಕ್ಕಿ ಹರಿದದ್ದು (ಆದ್ರವಣ) ಇದರಿಂದ ಸೂಚಿತವಾಗಿದೆ. ಶೂದ್ರಶಬ್ದದ ವ್ಯುತ್ಪತ್ತಿಯನ್ನು ಎರಡು ವಿಧಗಳಲ್ಲಿ ವಿಭಾಗಿಸಿ ಹೇಳಬಹುದು: ಅವನು ಶೋಕದೊಳಗೆ ಮುಳುಗಿಹೋದ; ಅಥವಾ 'ಶೋಕವು ಅವನನ್ನಾವರಿಸಿತು' ಮತ್ತು ಆಗ ಅವನು ರೈಕ್ವನಲ್ಲಿಗೆ ಹೋದ, ಹೀಗೆ ಶೂದ್ರಪದ ಪ್ರಯೋಗವು ಇಲ್ಲಿ ರೂಢ್ಯರ್ಥದಲ್ಲಿ ತೆಗೆದುಕೊಳ್ಳಲು ಬರುವುದಿಲ್ಲ; ಆದರೆ ಅವಯವಾರ್ಥವು ಸಮಂಜಸವಾಗುತ್ತದೆ.)

* * * *

ಅನುವಾದಕರ ಟಿಪ್ಪಣಿ : ಇದರ ಸಾರಾಂಶವಿಷ್ಟೆ : ತತ್ತ್ವಶಾಸ್ತ್ರದ ಪರಿಧಿಯಲ್ಲಿ ಬರುವ ಚರ್ಚೆಗೆ ಧರ್ಮಶಾಸ್ತ್ರಕಾರರ ತೀರ್ಮಾನಗಳೇ ಮಾರ್ಗದರ್ಶಕ ಸೂತ್ರಗಳು. ಶಂಕರರಂತಹ ವಾದಪಟುಗಳು ಕೂಡ ಈ ಧರ್ಮಶಾಸ್ತ್ರಕಾರರ ನಿರ್ದೇಶನವನ್ನು ಮೀರಿ ನಿಲ್ಲಲಿಲ್ಲ. ಏಕೆಂದರೆ ಅವರ ಸಮಾಜಶಾಸ್ತ್ರ ದೃಷ್ಟಿಯು ಮನುವಿನ ದೃಷ್ಟಿಯಿಂದ ಭಿನ್ನವಾಗಿರಲಿಲ್ಲ. ಆ ದೃಷ್ಟಿಗೆ ಬೆಂಬಲವಾಗಿ ಅವರು ತತ್ತ್ವಶಾಸ್ತ್ರ ಪ್ರಣಾಲಿಕೆಯನ್ನು ಬೆಳೆಸುತ್ತಾರೆ. ಅವರ ಸಮಾಜಶಾಸ್ತ್ರ ಮತ್ತು ತತ್ತ್ವಶಾಸ್ತ್ರಗಳು ಅವಿನಾಭಾವ ಸಂಬಂಧವನ್ನು ಹೊಂದಿವೆ. ಇದನ್ನು ಅರಿಯದೆ ಶಂಕರರಂತಹ ಅಥವಾ ಪ್ಲೇಟೋನಂತಹವರ ತಾತ್ವಿಕ ಧೋರಣೆ ಮತ್ತು ಶ್ರದ್ಧೆಗಳನ್ನು ಅಳೆಯಹೊರಡುವುದು ಅಸಂಗತವಾಗುತ್ತದೆ. ಶೂದ್ರನು 'ನೊಂದುಕೊಂಡವನು' ಎಂಬ ವ್ಯುತ್ಪತ್ತಿಯಿಂದ ಶೂದ್ರನಿಗೆ ಸಮಾಧಾನವೇನೂ ಉಂಟಾಗಲಾರದು. ನೊಂದುಕೊಳ್ಳುವಂತಹ ಪರಿಸ್ಥಿತಿಯನ್ನು ದೂರಮಾಡುವ ತತ್ತ್ವಶಾಸ್ತ್ರದ ಅಗತ್ಯ ನಮಗಿದೆ. ಮನುವಿನ ದೃಷ್ಟಿಯಲ್ಲಿ ಶೂದ್ರನಿಗೆ ಬಹುವಿಧಗಳಲ್ಲಿ ಸಮಾನಳಾದವಳು ಮಹಿಳೆ. ಆದ್ದರಿಂದ ಅವನಿಗೆ ಅನ್ವಯವಾಗುವ ಅನೇಕ ವಿಧಿಗಳು ನಿಯಮಗಳು ಅವಳಿಗೂ ಅನ್ವಯವಾಗುತ್ತವೆ. ಹಾಗಿದ್ದರೆ ಅವರಿಬ್ಬರೂ ಆತುಕೊಳ್ಳಬೇಕಾದ ಸಮಾಜಶಾಸ್ತ್ರ ಮತ್ತು ತತ್ತ್ವಶಾಸ್ತ್ರಗಳ ಬಗೆಗಿನ ವಿಮೋಚನೆ ಅತ್ಯಗತ್ಯವಾಗಿದೆಯಲ್ಲವೆ?. □

ಸಶಸ್ತ್ರ ಸೇನೆಗೆ ಮಹಿಳೆಯ ಪ್ರವೇಶ

ಯುದ್ಧರಂಗಕ್ಕೆ ಮಹಿಳೆ ಹೊಸಬಳಲ್ಲ. ಪೌರುಷದ ಸಂಕೇತವಾಗಿ ದಂಡೆತ್ತಿ ಹೋಗದಿದ್ದರೂ, ದೇಶದ ರಕ್ಷಣೆಗೆ ಮುನ್ನುಗ್ಗಿದ ಮಹಿಳೆಯರು ಎಲ್ಲ ಕಾಲದಲ್ಲಿಯೂ ಇದ್ದರು.

ಕ್ರಿಸ್ತಶಕ ಒಂದರಲ್ಲೇ ಆಂಗ್ಲ ಮಹಿಳೆ ಬ್ಯೂಡಿಕ್ಕ ಫಿಂಬಾಕೆ, ರೋಮನ್ನರು ಧಾಳಿ ಇಟ್ಟು ಕಬಳಿಸಿ ನಿಂತ ತನ್ನ ರಾಜ್ಯದಲ್ಲಿ, ಅವರ ವಿರುದ್ಧ ಸೇನೆಕಟ್ಟಿ ಕಾಳಗಕ್ಕಿಳಿದಳು. ರೋಮನ್ನರ ದುರಾಡಳಿತ, ವಿಪರೀತದ ತೆರಿಗೆ ಜನರನ್ನು ಕಾಡುತ್ತಿದ್ದಾಗ, ದಂಡು ಕಟ್ಟಿ ಹೊರಟ ಈಕೆ ಯುದ್ಧದಲ್ಲಿ ಮಡಿದಳು. ಹತ್ತನೇ ಶತಮಾನದಲ್ಲಿ ಮರ್ಸಿಯನ್ನರ ರಾಣಿಯಾಗಿ ಆಳಿದ ಎಥೆಲ್‌ಫೆಡ್, ಆಕ್ರಮಣ–ರಕ್ಷಣೆ ಎರಡರಲ್ಲೂ ನಿಪುಣಳಿದ್ದಳು. ಕ್ರಿಸ್ತಶಕ 910–915ರ ನಡುವೆ ಈಕೆ ಹತ್ತು ಕೋಟೆಗಳನ್ನು ನಿರ್ಮಿಸಿದ್ದಳು. ಹದಿನೈದನೇ ಶತಮಾನದಲ್ಲಿ ಫ್ರಾನ್ಸ್ ದೇಶದ ರೈತಾಪಿ ಹುಡುಗಿ ಜೋನ್ ಆಫ್ ಆರ್ಕ್ ಯುದ್ಧದ ಮುಖಂಡಳಾಗಿ ಮೇಲೇರಿದ್ದಳು. ಫ್ರಾನ್ಸ್ ದೇಶದ ಸಿಂಹಾಸನ ಆಂಗ್ಲರಿಗೆ ವಶವಾಗಕೂಡದೆಂದು ಹೋರಾಡಿದ್ದಳು.

—ಶೇಷಿಂಚಂದ್ರ

ಎರಡನೇ ಮಹಾಯುದ್ಧದಲ್ಲಿ ಪುರುಷರ ಸಮಕ್ಕೆ ನಿಂತು ಹೋರಾಡಿದ ಮಹಿಳೆಯರಿದ್ದರು. ಕೇವಲ ಹವ್ಯಾಸಕ್ಕೆ ವಿಮಾನ ಹಾರಾಟವನ್ನು ಕಲಿತ ಮಹಿಳೆಯರು ಮಹಾಯುದ್ಧಗಳ ಭಾರೀ ನರಮೇಧದಲ್ಲಿ, ಪುರುಷ ಚಾಲಕರು ದೊಡ್ಡ ಸಂಖ್ಯೆಯಲ್ಲಿ ಮೃತರಾದಾಗ, ಯಾವುದೇ ಮಿಲಿಟರಿ ತರಪೇತಿಲ್ಲದೆ ಯುದ್ಧರಂಗಕ್ಕೆ ಧುಮುಕಿದರು. ಸೋವಿಯತ್ ಒಕ್ಕೂಟದಲ್ಲಿ 'ರೆಡ್ ಏರ್ ಫೋರ್ಸ್'ಗೆ ಸೇರಿದ ಲಿಡಿಯಾ ಲಿತ್ವಾಕ್ ಮತ್ತು ಎಕತೇರಿನ ಶಾತ್ಕಾ ಬುದನೋವ ಬಾಂಬರ್ ವಿಮಾನ ಚಾಲಕಿಯರಾಗಿದ್ದರು. ಲಿಡಿಯಾ ತನ್ನ ಯಾಕ್–1 ಮಿಲಿಟರಿ ವಿಮಾನದಲ್ಲಿ 130 ಹೋರದಾಳಿಗಳನ್ನು ನಡೆಸಿ, 12 ಅಧಿಕೃತ ವಿಜಯಗಳನ್ನು ಗಳಿಸಿದಾಕೆ. 'ವೀರ ಮಹಿಳೆ' ಎನಿಸಿದ ಈಕೆ ತನ್ನ 22ನೇ ವಯಸ್ಸಿನಲ್ಲಿ, ಯುದ್ಧದಲ್ಲಿ ಮಡಿದಳು. 1942ರಲ್ಲಿ ಸೋವಿಯತ್ ಒಕ್ಕೂಟದಲ್ಲಿ ಮೂರು ಮಹಿಳಾ ಪಡೆಗಳು ಸಿದ್ಧವಾಗಿದ್ದವು. . 586ನೇ 'ಫೈಟರ್ ಏರ್‌ರೆಜಿಮೆಂಟ್', 587ನೇ 'ಬಾಂಬರ್ ಏರ್ ರೆಜಿಮೆಂಟ್' ಹಾಗೂ 588ನೇ ರಾತ್ರಿಧಾಳಿ ನಡೆಸುವ 'ನೈಟ್ ಬಾಂಬರ್ ಏರ್ ರೆಜಿಮೆಂಟ್' ದೇಶದ ತುರ್ತು ಸಮಯದಲ್ಲಿ ಯುದ್ಧರಂಗಕ್ಕೆ ಧುಮುಕಿದ ಈ ಮಹಿಳಾ ಪಡೆಗಳು ಎಲ್ಲಿಲ್ಲದ ಸಾಹಸ ತೋರಿದವು. ಮೇಜರ್ ಎವ್ಡೋಕಿಯ ಬೆರ್‌ಶಾನ್‌ಸ್ಕಯಳ ರೆಜಿಮೆಂಟ್ 24,000 ಹೋರದಾಳಿಗಳಲ್ಲಿ ಹಾರಾಡಿ, 23,000 ಟನ್ ಬಾಂಬನ್ನು ಒಗೆದಿತ್ತು. ಆದರೆ ಯುದ್ಧ ಮುಗಿದೊಡನೆ ಪುರುಷ ವಿಮಾನ ಚಾಲಕರ ತರಪೇತು ಪ್ರಾರಂಭಿಸಿ, ಮಹಿಳೆಯರನ್ನು ಸೇನೆಯಿಂದ ಹೊರಗಿಟ್ಟರು.

1918ರಲ್ಲಿಯೇ 'ರಾಯಲ್ ಏರ್‌ಫೋರ್ಸ್'ನ ಮಹಿಳಾ ಪಡೆ ರೂಪುಗೊಂಡಿತ್ತು. 32,000 ಮಹಿಳೆಯರು ಈ ವಾಯುಸೇನೆಯಲ್ಲಿ ಸೇವೆ ಸಲ್ಲಿಸಿದ್ದರು. 1920ರಲ್ಲಿ 'ಮಹಿಳೆಯರಿಗೆ ಸೇನೆಯಲ್ಲಿ ಪ್ರವೇಶ ಕೂಡದು' ಎಂಬ ನೀತಿ ತಂದು, ಈ ಪಡೆಯನ್ನು ತೆಗೆದು ಹಾಕಲಾಗಿತ್ತು. 1938ರ ಹೊತ್ತಿಗೆ ಎರಡನೇ ಮಹಾಯುದ್ಧದ ದಟ್ಟ ಮೋಡಗಳು ಕವಿದಾಗ, ತಮ್ಮ ನೀತಿಯನ್ನು ಬದಲಿಸಿ ಥಟ್ಟನೆ ಮಹಿಳೆಯರಿಗೆ ಬಾಗಿಲು ತೆರೆಯಲಾಯಿತು. ಆಗ ವಾಯುಸೇನೆಯಲ್ಲಿ 2000 ಇದ್ದ ಮಹಿಳೆಯರು, 1943ರ ಹೊತ್ತಿಗೆ 1,82,000ಕ್ಕೆ ಹೆಚ್ಚಿದ್ದರು. ಇವರಲ್ಲಿ ಅನೇಕರಿಗೆ ವೀರತನದ ಸೇನೆಯ ಪದಕಗಳು ದೊರೆತಿದ್ದವು.

ಅಮೆರಿಕೆಯಲ್ಲಿ 1948ರಲ್ಲಿಯೇ 'ಮಹಿಳಾ ಸಶಸ್ತ್ರ ಸೇವೆಯ ಕಾಯಿದೆ' ಯುದ್ಧಭಾದ ಪಕ್ಷದಲ್ಲಿ ಮಹಿಳೆಯರನ್ನು ಬಳಸಿಕೊಳ್ಳಲು ಸಹಾಯಕವಾಗಿತ್ತು. ಆದರೂ ನೌಕಾ ಅಕಾಡೆಮಿಗೆ ಮಹಿಳೆಯರಿಗೆ ಪ್ರವೇಶ ಸಿಕ್ಕಿದ್ದು 1976ರಲ್ಲಿ. ಕೆನಡಾ, ಯು.ಕೆ., ಫ್ರಾನ್ಸ್, ಆಸ್ಟ್ರೇಲಿಯಾ ಮುಂತಾದ ದೇಶಗಳು ಮಹಿಳೆಯರನ್ನು ರಕ್ಷಣಾದಳದಲ್ಲಿ ಸೇರಿಸಿಕೊಂಡಿವೆ.

ವಿಜ್ಞಾನದೊಡನೆ ಯುದ್ಧತಂತ್ರಗಳು ಬದಲಾದವು ಬಾಹುಬಲದಿಂದಲೇ ಸೆಣಸಿ ಗೆಲ್ಲುವ ಕಾಲ ಮುಗಿಯಿತು. ಹಗುರಾದ ಯುದ್ಧ ಸಲಕರಣೆಗಳು ಚತುರತೆಯನ್ನು, ಕುಶಲತೆಯನ್ನು ಬಯಸಿದವು. ಇಂದಿನ ಎಲೆಕ್ಟ್ರಾನಿಕ್ ಯುದ್ಧದ ಯುಗದಲ್ಲಿ ಗುಂಡಿ ಒತ್ತುವ ಬೆರಳಿನಿಂದ ಕ್ಷಿಪಣಿಗಳು, ಟಾರ್‌ಪಿಡೋಗಳು, ಬಾಂಬುಗಳು ಉದುರುತ್ತವೆ.

ಎಲೆಕ್ಟ್ರಾನಿಕ್ ಹಾಗೂ ಮೆಕಾನಿಕಲ್ ಇಂಜಿನಿಯರಿಂಗ್‌ನಲ್ಲಿ ಪದವಿ ಪಡೆದ ಮಹಿಳೆಯರು ವಾಯುಸೇನೆಯನ್ನು ಸೇರಿದ್ದು, ಇದೀಗ ಅವರ ತರಪೇತು ಆರಂಭವಾಗಿದೆ. ಅಖಿಲ ಭಾರತದ ಮಟ್ಟದಲ್ಲಿ ಪುರುಷರೊಡನೆ ಸ್ಪರ್ಧಿಸಿ ಆಯ್ಕೆಯಾದ ಮಹಿಳೆಯರು ಇವರು. ಪುರುಷರ ಸಂಖ್ಯೆಯನ್ನು ಮೀರಿಸಿ ನಿಂತಿದ್ದಾರೆ. 22 ಮಂದಿ ಪುರುಷರು ಆಯ್ಕೆಯಾಗಿದ್ದರೆ, 25 ಮಹಿಳೆಯರು ಆಯ್ಕೆಯಾಗಿದ್ದಾರೆ. ಅವರಲ್ಲಿ ಎಂಟು ಮಂದಿ ಕರ್ನಾಟಕದವರೆಂಬುದು ಹೆಮ್ಮೆಯ ವಿಷಯ. ಬೆಂಗಳೂರಿನ ಜಾಲಹಳ್ಳಿಯಲ್ಲಿರುವ 'ವಾಯುಸೇನೆಯ ತಾಂತ್ರಿಕ ಕಾಲೇಜಿ' ನಲ್ಲಿ ಅವರ ತರಪೇತಿ ನಡೆಯುತ್ತಿದೆ.

ನಮ್ಮ ದೇಶದ ಇತಿಹಾಸ ಕಿತ್ತೂರು ಚೆನ್ನಮ್ಮ, ಝಾನ್ಸಿ ರಾಣಿ ಲಕ್ಷ್ಮೀಬಾಯಿಯಂಥವರಿಂದ ತುಂಬಿ ನಿಂತಿದೆ. ಆದರೂ ಮಹಿಳೆ ಸೇನೆ ಸೇರಲು ದೇಶಕ್ಕೆ ಸ್ವಾತಂತ್ರ್ಯ ಬಂದಮೇಲೆ, 45 ವರ್ಷ ಕಾಯಬೇಕಾಯಿತು! 1992ರಲ್ಲಿ ಮಹಿಳೆಯರನ್ನು ಸಶಸ್ತ್ರ ಪಡೆಗೆ ಸೇರಿಸಿಕೊಳ್ಳಲು ಸರ್ಕಾರ ನಿರ್ಧರಿಸಿತು. ಪುರುಷರ ಪೌರುಷ ರಂಗವೆನಿಸಿದ ಸೇನೆ ಮೊಟ್ಟ ಮೊದಲಿಗೆ ತನ್ನ ಪೂರ್ವಾಗ್ರಹವನ್ನು ತೊಡೆದು, ಮಹಿಳೆಯರಿಗೆ ಪ್ರವೇಶ ನೀಡಿತು. ಅಡ್ಮಿರಲ್ ಎಲ್. ರಾಮದಾಸ್, ಬಾಂಬೆಯಲ್ಲಿ ಕರೆದ ಪತ್ರಕರ್ತರ ಸಭೆಯಲ್ಲಿ, ನೌಕಾಪಡೆಗೆ ಮಹಿಳೆಯರನ್ನು ಅಧಿಕೃತ ಅಧಿಕಾರಿಗಳಾಗಿ ನೇಮಿಸಿಕೊಳ್ಳುವ ನಿರ್ಧಾರವನ್ನು ತಿಳಿಸಿದ್ದರು. ಥಟ್ಟನೆ ಪತ್ರಿಕೆಗಳಲ್ಲಿ ಜಾಹಿರಾತುಗಳು ಹೊರಬಿದ್ದವು. ವಾಯುಸೇನೆ, ಭೂಸೇನೆಗಳ ಬಾಗಿಲೂ ತೆರೆಯಿತು.

ಸಶಸ್ತ್ರ ಸೇನೆಗೆ ಪ್ರವೇಶ ಸುಲಭ ಸಾಧ್ಯವಲ್ಲ. ಅಭ್ಯರ್ಥಿಗಳ ಅಂಕಗಳ, ಹಾಗೂ ಅರ್ಹತೆಯಮೇಲೆ ಆಧರಿಸಿದೆ. 'ಸರ್ವಿಸ್ ಸೆಲೆಕ್ಷನ್ ಬೋರ್ಡಿ'ನ ಸುದೀರ್ಘ ಸಂದರ್ಶನದ ನಂತರ ದೈಹಿಕ ಸಾಮರ್ಥ್ಯವನ್ನೂ ನೋಡಿ ಆಯ್ಕೆ. 3–4 ದಿನಗಳು ಜರುಗುವ ಪ್ರವೇಶ ಪರೀಕ್ಷೆಯಲ್ಲಿ ಆಕೆಯ ಯೋಗ್ಯತೆಯನ್ನು ಗುರುತಿಸಲಾಗುತ್ತದೆ. ಇಲ್ಲಿ ಆಯ್ಕೆಯಾದವರು ಕೇಂದ್ರ ಸರ್ಕಾರದ ಮೊದಲ ದರ್ಜೆಯ ಅಧಿಕಾರಿಗಳಾಗುತ್ತಾರೆ. ಈ ಮಹಿಳೆಯರಿಗೆ ಸಧ್ಯಕ್ಕೆ ಐದರಿಂದ ಏಳುವರ್ಷಗಳ ಸೇವಾಸಮಯವನ್ನು ನೀಡಿದ್ದಾರೆ. ಕೊನೆಯ ವರ್ಷದಲ್ಲಿ ಮಹಿಳೆಯರ ಕಾರ್ಯ–ಕೌಶಲವನ್ನು ನೋಡಿ, ಸೇನೆಯ ಅವಶ್ಯಕತೆಗನುಸಾರವಾಗಿ ಸೇವಾವಧಿಯನ್ನು ಹೆಚ್ಚಿಸಲೂ ಬಹುದು, ಕಾಯಂ ಆಗಿಸಲೂಬಹುದು. □

ನಿಮಗೆ ಗೊತ್ತಿತ್ತೇ?

ಪಶ್ಚಿಮ ಬಂಗಾಲದ 29 ವರ್ಷದ ಜಸ್‌ವೀರ್‌ಕೌರ್ ಭಾರತದ ಏಕೈಕ ಟ್ಯಾಕ್ಸಿ ಚಾಲಕಿ, 1989ರಲ್ಲಿ ಆಕೆಯ ಪತಿ ತೀವ್ರವಾಗಿ ಕಾಯಿಲೆ ಬಿದ್ದಾಗ, ಕೆಲವೇ ದಿನಗಳಲ್ಲಿ ಕಾರು ಓಡಿಸುವುದನ್ನು ಕಲಿತ ಈಕೆ, ಕಲಕತ್ತೆಯ ರಸ್ತೆಗಳಲ್ಲೀಗ ಸಾಮಾನ್ಯ ದೃಶ್ಯವಾಗಿದ್ದಾಳೆ.

★ ★ ★

ಪುಣೆಯ 24 ವರ್ಷದ ಶೀಲಾ ದಾವ್ರೆ, ಭಾರತದ ಮೊಟ್ಟ ಮೊದಲ ಆಟೋರಿಕ್ಷಾ ಚಾಲಕಿ. ಮಹಾರಾಷ್ಟ್ರ ರಾಜ್ಯ ವಿದ್ಯುಚ್ಛಕ್ತಿ ನಿಗಮದಲ್ಲಿ ದುಡಿಯುತ್ತಿದ್ದ ಈಕೆ, ಕಾರ್ಮಿಕರ ಹಂಗಾಮಿ ಕಾಲದಲ್ಲಿ ಕೆಲಸ ಕಳಕೊಂಡಾಗ, ಮತ್ತೆ ಕೆಲಸಕ್ಕಾಗಿ ಅಲೆಯದೆ, 1988ರಲ್ಲಿ ಓಡಿಸಲು ಪ್ರಾರಂಭಿಸಿದಳು,



ವ್ಯಕ್ತಿವಿಶೇಷ...

ಮೇರಿ ಆಸ್ಟೆಲ್

ಸಂಗ್ರಹ :
ಬಿ. ಎನ್. ಸುಮಿತ್ರಾಬಾಯಿ

ಮೇರಿ ವೂಲ್ಸ್‌ಟನ್ ಕ್ರಾಫ್ಟ್ ಅವರ **A vindication of the Right of woman** ಕೃತಿಯನ್ನು ರಚಿಸುವುದಕ್ಕೂ ಮೊದಲು ಸುಮಾರು ಒಂದು ಶತಮಾನದ ಹಿಂದೆ 1694ರಲ್ಲಿ ಮೇರಿ ಆಸ್ಟೆಲ್ ಎಂಬಾಕೆ ಅಂಥದೇ ವಿಚಾರಗಳನ್ನು ಪ್ರತಿಪಾದಿಸಿದ್ದರು. ಪಿತೃಪ್ರಧಾನ ವ್ಯವಸ್ಥೆಯ ಬಗ್ಗೆ ಆಕೆ ತೀವ್ರವಾದ ಸೂಕ್ಷ್ಮವಾದ ವಿಮರ್ಶೆ ನಡೆಸಿದ್ದರು. **A Serious proposal to Ladies (1694)** ಮತ್ತು **Some Reflections upon Marriage occassioned by Duke and Duchess of Mazarine's case (1700)** ಎಂಬ ಎರಡು ರಚನೆಗಳಲ್ಲಿ ಮೇರಿ ಆಸ್ಟೆಲ್ ವ್ಯಕ್ತಪಡಿಸುವ, ಚರ್ಚಿಸುವ ವಿಚಾರಗಳು ವಿಶಿಷ್ಟ ರೀತಿಯಲ್ಲಿ ಸಮಕಾಲೀನವೆನಿಸುವಂತಿವೆ. ಲಿಂಗ ಅಸಮಾನತೆಯನ್ನುಳ್ಳ ವ್ಯವಸ್ಥೆಯ ವಾಸ್ತವಾಂಶಗಳನ್ನು ತಮ್ಮ ನೈಜ ಅನುಭವಗಳ ಬೆಳಕಿನಲ್ಲಿ ವಿವರಿಸಲು ಯತ್ನಿಸಿದ ಇತರ ಮಹಿಳೆಯರ ಹಾಗೆಯೇ ಮೇರಿ ಆಸ್ಟೆಲ್ ಕೂಡ ಜನರ ಅವಹೇಳನ, ಗೇಲಿ, ತಿರಸ್ಕಾರ ಗಳಿಗೆ ಒಳಗಾಗಬೇಕಾಯಿತು. ಅವರ ಬೌದ್ಧಿಕ ಕಾಣಿಕೆಯನ್ನು ಇತಿಹಾಸದಿಂದಲೇ ಇಲ್ಲವಾಗಿಸುವ ಯತ್ನ ನಿರಂತರವಾಗಿ ನಡೆಯಿತು.

ತೋರಿಕೆಯ ಪೌರುಷ. ತೋರಿಕೆಯ ಶೌರ್ಯಗಳ ಬಗ್ಗೆ ತಿರಸ್ಕಾರವಿದ್ದ ಮೇರಿ ಆಸ್ಟೆಲ್ ಈ ತೋರ್ಕೆಗಳು 'ವೇಷಮರೆಸಿದ ಅವಮಾನಗಳು; ಎಲ್ಲ ಹೆಂಗಸರೂ ಮೂರ್ಖರೆಂದು ನಂಬಿಸಲು ಪುರುಷರು ನಡೆಸುವ ಆಗ್ರಹ' ಎಂದು ಭಾವಿಸುತ್ತಿದ್ದರು, ವೈವಾಹಿಕ ಬದುಕಿನಲ್ಲಿ ಮಹಿಳೆಯರ ಬವಣೆ ಕುರಿತಂತೆ ಮೇರಿ ಆಸ್ಟೆಲ್ ವ್ಯಕ್ತಪಡಿಸುವ ವಿಚಾರಗಳನ್ನು ಇಂದಿಗೂ ಅನ್ವಯಿಸಬಹುದಾಗಿದೆ. 'ಗಂಡಸು ಒಬ್ಬ ಆಸಕ್ತಿಕರ ಉದ್ಯೋಗವುಳ್ಳ ಹೆಣ್ಣಿನ ಕೈ ಹಿಡಿಯ ಬಯಸಿಯಾನು. ಅದರಿಂದ ಅವನಿಗೆ ಆಸಕ್ತಿದಾಯಕ ಸಂಗಾತಿ ದೊರೆಯುವುದಷ್ಟೇ ಅಲ್ಲ. ಕುಟುಂಬ ನಿರ್ವಹಣೆಯ ವೆಚ್ಚಗಳಿಗೆ ಕಾಣಿಕೆಕೂಡ ದೊರೆತು ಅವನ ಜವಾಬ್ದಾರಿ ಕಡಿಮೆಯಾಗುತ್ತದೆ' ಎಂದು ಮೇರಿ ಆಸ್ಟೆಲ್ ನೀಡುವ ಚಿತ್ರ ಇಂದಿನ **Super woman** ಚಿತ್ರವೇ ಆಗಿದೆ. ಶತಮಾನಗಳು ಉರುಳಿದರೂ ಮಹಿಳೆಯರ ಮೂಲಭೂತ ಸಮಸ್ಯೆಯಲ್ಲಿ ಹೆಚ್ಚಿನ ಪ್ರಗತಿಯಾಗಲಿಲ್ಲವೆನ್ನುವುದಕ್ಕೆ ಅಸ್ಟೆಲ್ಲರ ಈ ನುಡಿಗಳು ನಿದರ್ಶನವೊದಗಿಸುತ್ತವೆ.

ನಮ್ಮ ಭೂತಕಾಲದ ಬಗ್ಗೆ ನಮಗೆ ಗೊತ್ತಿರುವುದು ತೀರಾ ಅಲ್ಪ. ಮಹಿಳೆಯರು ಈ ಹಿಂದೆ ಏನನ್ನು ಚಿಂತಿಸಿದ್ದಾರೆ, ಅವರ ಚಿಂತನೆ, ವಿಚಾರಗಳನ್ನು ಹೇಗೆ ನಡೆಸಿಕೊಳ್ಳಲಾಗಿದೆ ಎಂಬುದರ ಅರಿವು ನಮಗಿಲ್ಲ. ಇದರ ಫಲವಾಗಿ ನಮ್ಮ ಇಂದಿನ ಸ್ಥಾನದ ಬಗ್ಗೆ ಅಲ್ಪ ತಿಳುವಳಿಕೆಯನ್ನೇ ಬಹು ಮೇಲ್ಮಟ್ಟದ್ದೆಂದು ಭಾವಿಸುತ್ತ, ಎಲ್ಲ ವ್ಯತ್ಯಾಸಗಳಿಗೂ ಕೂಡಲೇ ತಾರತಮ್ಯದ ರೂಪಕೊಡುವಂಥ ಸಮಾಜದೊಳಗೇ ಹಳಬರ ದೃಷ್ಟಿಗಳನ್ನೂ ಅಳಿದು ಬಿಡುವ ಪ್ರಲೋಭನೆಗೆ ಒಳಗಾಗುತ್ತೇವೆ. ನಮ್ಮ ಹಿಂದಿನ 'ಈ ಆದಿಮಾತೆಯರು' ಎಲ್ಲಿ ತಪ್ಪಿದರು ಎಂಬುದಕ್ಕಿಂತ ಅವರ ನಮ್ಮ ನಡುವೆ ಏನು ಸಮಾನ ಅಂಶ ಎಂಬುದನ್ನು ಗುರುತಿಸುವುದು ಹೆಚ್ಚು ಉಪಯುಕ್ತ. ಇದು ಅಂಥ ದೃಷ್ಟಿಯಿಂದ ನೀಡಿರುವ ವ್ಯಕ್ತಿಚಿತ್ರ.

ಮಹಿಳೆಯರು ಪುರುಷರಿಗೆ ತಮ್ಮನ್ನು ಅಧೀನವಾಗಿ ಒಪ್ಪಿಸಿಕೊಳ್ಳುವುದನ್ನೇ ಬಯಸುತ್ತಾರೆ ಎಂಬುದು ಬಹು ಹಳೆಯವಾದ. ಈ ವಿಚಾರ ಹುಟ್ಟಿದ್ದೆಲ್ಲಿಂದ? ಯಾರ ಆಸಕ್ತಿಗೆ ಅದು ದುಡಿಯುತ್ತದೆ? ಎಂದು ಪ್ರಶ್ನಿಸುವ ಆಸ್ಟೆಲ್ ಮಹಿಳೆಯರನ್ನು ಮೊದಲು ಇಂಥ ಅಧೀನಸ್ಥಾನಕ್ಕೆ ತಳ್ಳುವ ತಂತ್ರಮಾಡಿ, ಅನಂತರ ಅವರೇ ಅದನ್ನು ಸಮರ್ಥಿಸುವಂತೆ ಒತ್ತಡತರುವ ಪುರುಷಪ್ರಧಾನ

ವ್ಯವಸ್ಥೆಯ ಬಗೆಗಳನ್ನು ವಿವರಿಸುತ್ತಾರೆ. ಪುರುಷರಿಗೆ ಹೋಲಿಸಿದರೆ ತಾವು ಯಾವ ಲೆಕ್ಕಕ್ಕೂ ಬಾರದವರೆಂಬುದನ್ನು ಮಹಿಳೆಯರು ನಿಜವಾಗಿ ಅರ್ಥಮಾಡಿಕೊಳ್ಳಬೇಕು ಎಂದು ತುಂಬಾ ವ್ಯಂಗ್ಯವಾಗಿ ಹೇಳಿ, ಆಸ್ಟೆಲ್ ಪ್ರಶ್ನಿಸುತ್ತಾರೆ: 'ಈ ಜಗತ್ತಿನಲ್ಲಿ ನಡೆದಿರುವ ಎಲ್ಲ ಮಹಾಕಾರ್ಯಗಳೂ ಪುರುಷರಿಂದಲೇ ಆದದ್ದಲ್ಲವೆ ! ಅವರು ರಾಜ್ಯಗಳನ್ನು ಕಟ್ಟಿ ಅವುಗಳನ್ನು ಒಡೆಯಲಿಲ್ಲವೆ? ಕಾನೂನುಗಳನ್ನು ಹುಟ್ಟುಹಾಕಿ ತಾವೇ ಅವುಗಳನ್ನು ಉಲ್ಲಂಘಿಸುತ್ತಿಲ್ಲವೆ? …. ಅವರ ವಿಶಾಲ ಮನಸ್ಸುಗಳು ರಾಜ್ಯಗಳನ್ನು ನಿರ್ನಾಮಮಾಡುತ್ತವೆ, ಅವರ ಆಸೆಗಳಿಗೆ ಯಾವುದೇ ಮಿತಿ ಬಂಧನಗಳಿಲ್ಲ. ಅವರು ಏನುತಾನೆ ಮಾಡಲಾರರು? ಲೋಕಗಳನ್ನು ಕಟ್ಟಿ ನಾಶಮಾಡಬಲ್ಲರು! ಸಾರ್ವತ್ರಿಕ ನೈಸರ್ಗಿಕ ಪದ್ಧತಿಗಳನ್ನು ರೂಪಿಸಿ, ಅನಂತಕಾಲದವರೆಗೆ ಆ ಬಗ್ಗೆ ವಾದ ವಿವಾದದಲ್ಲಿ ತೊಡಗಬಲ್ಲರು. ಅತ್ಯಂತ ಕ್ಷುದ್ರ ವಿವಾದಕ್ಕೂ ಅವರ ಲೇಖನಗಳು ಅರ್ಹತೆ ದೊರಕಿಸಿಕೊಡಬಲ್ಲವು ….' ಈ ಬಗೆಯ ಕಟುವ್ಯಂಗ್ಯ ಆಸ್ಟೆಲ್ಲರ ಶೈಲಿಯ ಪ್ರಮುಖ ಗುಣವಾಗಿದ್ದು, ಎಷ್ಟೋಬಾರಿ ವ್ಯಂಗ್ಯ, ತಮಾಷೆಗಳು ಪುರುಷರ ಹಕ್ಕೆಂದು ಭಾವಿಸುವ ವಿಮರ್ಶಕ, ವಿಮರ್ಶಕಿಯರು ಆಸ್ಟೆಲ್ಲರ ಬರಹಗಳನ್ನು ಅಪಮೌಲ್ಯಮಾಪನಮಾಡಿರುದುಂಟು. ಸ್ವತಃ ಅವಿವಾಹಿತರಾಗಿ ಇದ್ದುದನ್ನೂ, ವಿವಾಹದ ಬಗ್ಗೆ ಅವರು ವ್ಯಕ್ತಪಡಿಸಿದ ಜನನಂಬುಗೆಗೆ ವಿರುದ್ಧವಾದ ವಿಚಾರಗಳನ್ನೂ ಒಂದೇ ಎಂಬಂತೆ ಪರಿಗಣಿಸಿ ಅಪಹಾಸ್ಯ ಅವಹೇಳನ ಮಾಡಿದವರುಂಟು.

1694ರಲ್ಲಿ ಮೇರಿ ಆಸ್ಟೆಲ್ ಬರೆದ **'A serious porposal to Ladies'** ಲೇಖನದಲ್ಲಿ ಸ್ತ್ರೀ–ಪುರುಷರ ನಡುವಿನ ವ್ಯತ್ಯಾಸಗಳ ವಾಸ್ತವಾಂಶಗಳನ್ನು ಮುಚ್ಚಿಡುವ, ನಿರಾಕರಿಸುವ ಯತ್ನ ಮಾಡಿರಲಿಲ್ಲ. ಆದರೆ ಇವುಗಳನ್ನು 'ದೈವನಿಯಾಮಕ' 'ಅಥವಾ 'ನಿಸರ್ಗಸಹಜ' ಎಂದು ಅರ್ಥ ಹಚ್ಚುವ ಸಾಂಪ್ರದಾಯಿಕ ವಿಧಾನದ ಆಚೆಗೆ ಇವುಗಳ ಮೂಲ ಕಾರಣಗಳನ್ನು ಹುಡುಕಲು, ವಿವರಿಸಲು ಆಕೆ ಯತ್ನಿಸಿದ್ದರು. ಮಹಿಳೆಯರನ್ನು ಅವರ ಹಿಡಿತದಲ್ಲಿಲ್ಲದವಂಥ ಕಾರಣಗಳಿಗಾಗಿ ನಿಂದಿಸಲಾಗುತ್ತಿದೆ ಎಂಬುದನ್ನು ಆಕೆ ತೋರಿಸಿದ್ದು, ಇವತ್ತಿಗೂ ಮುಖ್ಯವೆನಿಸಬಲ್ಲ ಪರಿಕಲ್ಪನೆಯೇ ಆಗಿದೆ. ಪುರುಷರು ಬಹಳಷ್ಟುಸಲ ಶ್ರೇಷ್ಠರಂತೆ ತೋರುವುದನ್ನೂ, ಮಹಿಳೆಯರು ಮೂರ್ಖರಂತೆ ತೋರುತ್ತಾರೆಂಬುದನ್ನೂ ಕಂಡಿದ್ದ ಆಸ್ಟೆಲ್ ಪುರುಷರ ಹಿತಾಸಕ್ತಿಗಳಿಗೆ ತಕ್ಕಂತೆ ಸಮಾಜವನ್ನು ವ್ಯವಸ್ಥೆಗೊಳಿಸುವ ಅಧಿಕಾರ. ಮತ್ತು ಸರಿತಪ್ಪುಗಳ ವ್ಯಾಖ್ಯಾನ ಮಾಡುವ ಅಧಿಕಾರ ಕೂಡ ಪುರುಷರ ಕೈಯಲ್ಲೇ ಇರುವುದರಿಂದ ಕೆಲವು ವ್ಯತ್ಯಾಸಗಳನ್ನು 'ನೈಸರ್ಗಿಕ' ಎಂದು ಸಮರ್ಥಿಸಿಕೊಳ್ಳುವುದು, ಕೆಲವನ್ನು 'ಸ್ತ್ರೀಯರಾಗಿರುವುದರಿಂದ ಕೀಳಾಗಿರುವುದು, ಕೀಳಾಗಿರುವುದೇ ಅಪರಾಧ' ಎಂದು ಅರ್ಥೈಸುವುದು ಪುರುಷರದೇ ತಂತ್ರವೆಂದು ಆಕೆ ಆರೋಪಿಸಿದ್ದರು. ಪುರುಷಾಧಿಪತ್ಯ, ಸಮಾಜೀಕರಣಗಳಿಂದ ಉಂಟಾಗಿರುವ ತಾರತಮ್ಯಗಳಿಗೆ ಮಹಿಳೆಯರನ್ನು ನಿಂದಿಸುವುದಲ್ಲದೆ ಅದರ ಮೂಲಕವೇ ಮಹಿಳೆಯರು ಶೋಷಿಸಲ್ಪಡುತ್ತಾರೆ ಎಂಬುದು ಆಸ್ಟೆಲ್ ಅವರ ಅಭಿಮತವಾಗಿತ್ತು.

ಶಿಕ್ಷಣ ಮೂಲದ ಈ ಸಮಸ್ಯೆಯು ಸ್ತ್ರೀಯರಿಗೆ ಶಿಕ್ಷಣವನ್ನು ನಿರಾಕರಿಸುವ ಮೂಲಕ ಬೆಳೆಸಲ್ಪಟ್ಟಿತೆಂದು ಪ್ರತಿಪಾದಿಸುವಲ್ಲಿ ಮೇರಿ ಆಸ್ಟೆಲ್ಲರ ವಿಚಾರಗಳು ಆಫ್ರಾಬೆನ್ ವಿಚಾರಗಳಿಗೆ ಹತ್ತಿರವಾಗುತ್ತವೆ. ಸ್ತ್ರೀಯರನ್ನು ಮೂರ್ಖತನಕ್ಕಾಗಿ ಶಿಕ್ಷಣದಿಂದ ಬಹಿಷ್ಕರಿಸುತ್ತಲೇ ಅವರನ್ನು ಹೊಗಳಿ ಅಟ್ಟಕ್ಕೇರಿಸುತ್ತ ಮೂರ್ಖರಾಗಿಯೇ ಉಳಿಯುವಂತೆ ಮಾಡುವುದರಲ್ಲಿ ಪುರುಷರು ತಮ್ಮ ದಕ್ಷತೆ ಮೆರೆದಿದ್ದಾರೆ. ಎಂದು ಸಾರಿದ ಮೇರಿ ಆಸ್ಟೆಲ್ ಎಂದೂ ಪುರುಷರ ಮೆಚ್ಚುಗೆಗಳಿಸುವುದಕ್ಕಾಗಿ ಬರೆಯಲಿಲ್ಲ. ಮುಂದೆ ಹತ್ತೊಂಭತ್ತನೆಯ ಶತಮಾನದಲ್ಲಿ ಅನೇಕ ಮಹಿಳೆಯರು ಸ್ತ್ರೀಯರ ಸ್ಥಾನಮಾನಗಳ ಸುಧಾರಣೆಗಾಗಿ ಯತ್ನಿಸಿದರು. ಅದಕ್ಕಾಗಿ ಪ್ರಚಲಿತ ಕಾನೂನುಗಳ ಪರಿಷ್ಕಾರಕ್ಕಾಗಿ ಒತ್ತಾಯಿಸಿದರು, ಅಂಥ ತಮ್ಮ ಯತ್ನಗಳಿಗೆ ಪುರುಷರ ಸಹಾಯ ಪಡೆಯಬೇಕಾದ ಅವಶ್ಯಕತೆ ಅವರಿಗೆ ಇದ್ದುದರಿಂದ ಮೇರಿ ವೂಲ್‌ಸ್ಟನ್‌ಕ್ರಾಫ್ಟ್ ಮುಂತಾದವರು ತಮ್ಮ ವಿಚಾರಗಳು ಪುರುಷರ ಸದ್ಭಾವನೆಗೆ ಒಳಗಾಗಬೇಕೆಂದು, ತಮ್ಮ ಯೋಗ್ಯತೆಯನ್ನು ಅವರು ಗ್ರಹಿಸುವಂತೆ ಮಾಡಬೇಕೆಂದು ಬರೆಯಬೇಕಾಯ್ತು. ಆದರೆ ಹಳಬರಾದ ಮೇರಿ ಆಸ್ಟೆಲ್ ಈ ಯಾವುದೇದಾಕ್ಷಿಣ್ಯಕ್ಕೆ ಒಳಗಾದವರಲ್ಲ. ತಮ್ಮ ಹಿರಿಮೆಯನ್ನು ತೋರಿಸಿಕೊಳ್ಳಲಿಕ್ಕಾಗಿ ಪುರುಷರು ಅನುಸರಿಸುವ ನಾನಾ ತಂತ್ರಗಳನ್ನು ಅವರು ನಿರ್ದಾಕ್ಷಿಣ್ಯವಾಗಿ ಬಯಲಿಗೆಳೆದರು. ಹೆಂಗಸರು ಮೂರ್ಖತನ, ಅಜ್ಞಾನಗಳನ್ನು ಬಿಟ್ಟುಬಿಟ್ಟರೆ ಗಂಡಸರು

ಕ್ರುದ್ಧರಾಗುವುದನ್ನು, ಪುರುಷರ ಮೇಲರಿಮೆಗೆ ಧಕ್ಕೆ ತಂದರೆ ಅವರನ್ನು ಕಟುವಾಗಿ ಟೀಕಿಸಿ, ದಂಡಿಸಲು ಮುಂದಾಗುತ್ತಾರೆಂಬುದನ್ನು ಅವರು ವಿವರಿಸಿದರು. ಹೆಂಗಸರು ಕೇವಲ ಮೈಕಟ್ಟು, ರೂಪ ಮತ್ತು ಮೂರ್ಖತನಗಳಿಗಾಗಿ ಹೊಗಳಿಸಿಕೊಳ್ಳುತ್ತಾ, ಅಂಥ ಸುಳ್ಳು ಹೊಗಳಿಕೆಯಲ್ಲೇ ಸಂತೃಪ್ತರಾಗುವುದರ ವಿರುದ್ಧ ಎಚ್ಚರಿಸುತ್ತಾ ಆಸ್ಟೆಲ್ 'ನೈಜವಾಗಿ ಮೆಚ್ಚಿಗೆಗೆ ಪಾತ್ರರಾಗುವ ನಿಜವಾಗಿ ಬಲಿಷ್ಠರಾಗುವಂಥ ಗುಣಗಳನ್ನು ಗಳಿಸಬೇಕಾದ ಅಗತ್ಯವನ್ನು ಸಾರುತ್ತಾರೆ.

ನಗೆಚಾಟಿಕೆ, ಚತುರೋಕ್ತಿ, ವಿಡಂಬನೆಗಳ ಒಡತಿ ಮೇರಿ ಆಸ್ಟೆಲ್ ಸ್ತ್ರೀ ಶಿಕ್ಷಣದ ತೀವ್ರ ಪ್ರತಿಪಾದಕಿ, ಕಾರ್ಯನಿರತೆಯಾಗಿದ್ದರು. ಮಹಿಳೆಯರದೇ ಆದ ಕಾಲೇಜಿನ ಸ್ಥಾಪನೆಗೆ ಮೊದಲು ಯತ್ನಿಸಿದ್ದಾಕೆ. ಆ ದಿಸೆಯಲ್ಲಿ ಬಂದ ಅಡ್ಡಿ, ಟೀಕೆ, ತೆಗಳಿಕೆಗೆ ಕುಗ್ಗಿ ಹೋಗದ ದಿಟ್ಟ ಹೆಂಗಸು.

ಮದುವೆ ವ್ಯವಸ್ಥೆಯೊಳಗೆ ಮಹಿಳೆಯರಿಗೆ ದೊರಕುವ ಅವಕಾಶಗಳ ಜೊತೆಯಲ್ಲೇ ಅವರು ಅದಕ್ಕಾಗಿ ತೆರಬೇಕಾದ ದಂಡಗಳತ್ತಲೂ ಆಸ್ಟೆಲ್ ಗಮನ ಸೆಳೆಯುತ್ತಾರೆ, ಹೆಂಡತಿಯಿಂದ ಪುರುಷರು ಅಪೇಕ್ಷಿಸುವುದೇನನ್ನು ಎಂಬ ಬಗ್ಗೆ ಪಟ್ಟಿ ಮಾಡುತ್ತಾ ಬರೆಯುತ್ತಾರೆ; ಆ ದೊಡ್ಡ ದೊಡ್ಡ ಶಬ್ದಗಳ ಅಡಿಯಲ್ಲಿ ಹುದುಗಿರುವ ಆತನ ಒಟ್ಟಾರೆ ತಾತ್ಪರ್ಯವೆಂದರೆ ಹೆಂಡತಿ ಆತನ ಕುಟುಂಬವನ್ನು ನಿಭಾಯಿಸಬೇಕು, ಮನೆಯನ್ನು ನೋಡಿಕೊಳ್ಳಬೇಕು. ಅವಳ ಹಿತಾಸಕ್ತಿಗಳು ಅವನದಕ್ಕೆ ವಿರುದ್ಧವಾಗಿರಬಾರದು. ಬಾಡಿಗೆ ಕೊಟ್ಟು ದುಡಿಸಿಕೊಳ್ಳಬಹುದಾದ ಬೇರೆಯಾವುದೇ ವ್ಯಕ್ತಿಗಿಂತ ಈಕೆ ಹೆಚ್ಚಿನ ವಿಶ್ವಾಸ ವಿಡಲು ಅರ್ಹಳಾಗಿರಬೇಕು. ಆತನ ಮಕ್ಕಳನ್ನು ಹಡೆಯಬೇಕು, ಅವರ ರಕ್ಷಣೆ, ಪೋಷಣೆಗಳ ಎಲ್ಲ ಜವಾಬ್ದಾರಿ ಹೊರಬೇಕು. ಆ ಮೂಲಕ ಆತನ, ಮತ್ತು ಅವನ ಕುಟುಂಬದ ಹೆಸರನ್ನು ಉಳಿಸಬೇಕು. ಅವಳ ರೂಪ, ಬುದ್ಧಿ, ತಾಳ್ಮೆ, ಮಾತಿನ ಚಾತುರ್ಯಗಳು ಮನೆಗೆ ಬಂದಾಗ ಅವನನ್ನು ರಂಜಿಸಬೇಕು. ಹೊರಗೆ ಇತರರಿಂದ ವಿರೋಧ, ನಿರಾಶೆ ಅನುಭವಿಸಿದ್ದರೆ ಆ ಕ್ರೂರ ಜಗತ್ತು ದೊರಕಿಸದ ನ್ಯಾಯವನ್ನು ಆಕೆ ಅವನಿಗೆ ದೊರಕಿಸಿಕೊಡಬೇಕು. ಅವನ ಹೆಮ್ಮೆಯನ್ನು ಶಾಂತಗೊಳಿಸಲು ತಾನೇ ಆತನಿಂದ ಆಳಿಸಿಕೊಳ್ಳಬೇಕು, ಆತನ ಇಚ್ಛಾನಿಚ್ಛೆಗಳಿಗೆ ತಕ್ಕಂತೆ ಆಕೆ ತನ್ನನ್ನು ರೂಪಿಸಿಕೊಳ್ಳಬೇಕು, ಎಷ್ಟೇ ಕೆಟ್ಟದಾಗಿ ಅವನು ನಡೆಸಿಕೊಂಡರೂ ಆತನ ಜೀವನಕ್ಕಾಗಿ ಬದುಕಬೇಕು, ಅವನ ಸೇವೆಯನ್ನು ತೊರೆಯಲಾರದ ವ್ಯಕ್ತಿಯಾಗಿ ಜೊತೆಗಿರಬೇಕು....

ಆಸ್ಟೆಲ್ ಅವರ ಈ ವಿಚಾರಗಳು ಸ್ತ್ರೀಯರ ಸಾಧನೆ, ಅವರ ಗುರಿ ಕುರಿತಂತೆ ಪುರುಷರ ದೃಷ್ಟಿಯನ್ನು ನೆಲೆಗೆಡವುತ್ತಾ, ಆ ಸ್ಥಳದಲ್ಲಿ ಸಮರ್ಥವಾಗಿ ಸ್ತ್ರೀಯರ ಅನುಭವಗಳ ವಾಸ್ತವಾಂಶದಿಂದ ದಾಖಲುಗೊಳಿಸುವ, ಸ್ತ್ರೀದೃಷ್ಟಿಯನ್ನು ಸ್ಥಾಪಿಸುವ ಪ್ರಯತ್ನಗಳೇ ಆಗಿವೆ. ಎರಡು ಲಿಂಗಜಾತಿಗಳ ನಡುವಿನ ವೈಷಮ್ಯ ದೈವನಿಯಾಮದ ಅಥವಾ ನೈಸರ್ಗಿಕ ಎಂಬ ವ್ಯಾಖ್ಯಾನದಿಂದ ಚಲಿಸಿ ಅಧಿಕಾರ ಮತ್ತು ಸಮಾಜೀಕರಣಗಳಲ್ಲಿ ಅವುಗಳ ಮೂಲವಿದೆಯೆಂದು ಪ್ರತಿಪಾದಿಸುವ ಮೇರಿ ಆಸ್ಟೆಲ್ ಮಹಿಳೆಯರು ತಮ್ಮದೇ ಅನುಭವಗಳಿಗೆ ಅಧಿಕೃತತೆಯನ್ನು ತಂದುಕೊಡಬೇಕು, ಎಂಬುದನ್ನು ಎತ್ತಿ ಹಿಡಿಯುತ್ತಾರೆ. ಪುರುಷರ ಮಾಧ್ಯಮದಿಂದ ಬಂದಿರುವ ಜ್ಞಾನದ ಮೇಲೆ ಮುಸುಕುಹಾಕಬಲ್ಲ ಅಧಿಕಾರವ್ಯವಸ್ಥೆಯಿಂದ ಮಹಿಳೆಯರ ವೈಯಕ್ತಿಕ ಅನುಭವಗಳು ರೂಪಕಳೆದುಕೊಳ್ಳುತ್ತವೆಂಬುದನ್ನು ಆಕೆ ಗುರುತಿಸಿದ್ದರು. ಪಿತೃಪ್ರಧಾನ ವ್ಯವಸ್ಥೆಯ ಹೊರಗೆ, ಅದರ ವ್ಯಾಖ್ಯಾನಕ್ಕೂ ಹೊರಗೆ ನಿಲ್ಲುವಂಥ ಸ್ವತಂತ್ರ ಮಹಿಳೆಯೊಬ್ಬರ ಈ ಬಗೆಯ ವಿಚಾರಗಳು ಕಳೆದ ಮೂನ್ನೂರು ವರ್ಷಗಳಲ್ಲಿ ಅನೇಕ ಬಾರಿ ಪುನರಾವರ್ತನೆ ಕಂಡಿರಬಹುದು. ಮಹಿಳಾ ವಿಮೋಚನೆಯ ಹೊಸಯುಗವೊಂದು ಅವತರಿಸುವ ಹೊತ್ತಿನಲ್ಲೇ ಇಂದಿನ ಬಹಳಷ್ಟು ವಿಶ್ಲೇಷಣೆಗಳು, ಪದಪುಂಜಗಳು, ವಿಚಾರಗಳು 'ಹೊಸತು' 'ಮಾರ್ಗದರ್ಶಕ' ಎನಿಸುವಂಥವೂ ಎಷ್ಟೋ "ಹಳೆಯವು" ಆಗಿವೆ ಎಂಬುದಕ್ಕೆ ಮೇರಿ ಆಸ್ಟೆಲ್ ಒಂದು ಸ್ಪಷ್ಟ ನಿದರ್ಶನ. ಕಾಲಕಾಲಕೆ ಇಂಥವರ ವಿಚಾರಗಳು ವ್ಯವಸ್ಥೆಯಲ್ಲಿ ಇಲ್ಲವಾಗಿಸಲ್ಪಡುತ್ತವೆ, ಮತ್ತು ಮಹಿಳೆಯರು ಮತ್ತೆ ಮತ್ತೆ ಅವುಗಳನ್ನು ಜೀವಂತಗೊಳಿಸಿಕೊಳ್ಳಬೇಕಾಗಿದೆ ಎಂಬುದಕ್ಕೂ ಇದು ಸಾಕ್ಷಿಯಾಗಿದೆ.



'ಅಮೃತಮತಿಯ ಸ್ವಗತ' : ಗಮನೀಯ ಸಂಕಲನ

ಪಿ. ಎಸ್. ಗೀತಾ

ನಾವು ಜನ್ಮವೆತ್ತುತ್ತಲೇ ಇದ್ದೇವೆ
ಅಮೃತ ಮತಿಯರಾಗಿ
ನಿನ್ನಂಥವನ ಗದ್ದುಗೆಯ ರಾಣಿಯರಾಗಿ
ಅವನು ಬದಗನಾಗಿ
ನಮಗುತ್ತರವಾಗಿ

ಅಮೃತಮತಿಯ ಸ್ವಗತ (ಕವನ ಸಂಕಲನ) :
ಎಚ್. ಎಲ್. ಪುಷ್ಪ
ಅನ್ವೇಷಣೆ ಪ್ರಕಾಶನ, ವಿಜಯನಗರ, ಬೆಂಗಳೂರು–40
ಪುಟ–68, ಬೆಲೆ ; ರೂ. 15/–

ಇವು ಹೆಚ್. ಎಲ್. ಪುಷ್ಪ ಅವರ ಕವನ ಸಂಕಲನಕ್ಕೆ ಹೆಸರು ನೀಡಿರುವ 'ಅಮೃತಮತಿಯ ಸ್ವಗತ' ಕವನದ ಉದ್ಧರಣೆ. ನಿರ್ದಿಷ್ಟ ವ್ಯಕ್ತಿತ್ವದ ಅಮೃತಮತಿಯನ್ನು, ಸಾರ್ವತ್ರಿಕವಾಗಿ, ತತ್ವವಾಗಿ ಪರಿವರ್ತಿಸಿರುವ ಇಲ್ಲಿನ ಭಾವ ಈ ಸಂಕಲನದ ಅನೇಕ ಕವಿತೆಗಳ ಪ್ರಧಾನ ಭಾವ. ಸಂಬಂಧಗಳ ಸಂಪನ್ನತೆ, ಸಂಕೀರ್ಣತೆ, ಹುಡುಕಾಟ ಮತ್ತು ಹುಸಿತನಗಳು ಮತ್ತೆ ಮತ್ತೆ ಇಲ್ಲಿ ಪ್ರಶ್ನೆಯಾಗಿ ನಿಲ್ಲುತ್ತವೆ. ಆಧುನಿಕ ಬದುಕಿನ ಸಂದರ್ಭದಲ್ಲಿ ಎಚ್ಚೆತ್ತ ವ್ಯಕ್ತಿ ನಿರ್ಲಕ್ಷಿಸಲು ಸಾಧ್ಯವೇ ಇಲ್ಲದ ಹಲವು ಸಂಗತಿಗಳೂ ಇಲ್ಲಿ ಕವನಗಳಾಗಿವೆ. ಗಂಡು ಹೆಣ್ಣಿನ ಸಂಬಂಧದ ಸಮಾನತೆಯ ಪ್ರಶ್ನೆ, ಶೋಷಣೆಗೆ ಒಳಗಾದವರ ನೋವು, ಆರ್ಥಿಕ ಅಸಮಾನತೆ ಹೀಗೆ,

ನೋವಿನಲ್ಲಿ ಅರಳಿ, ನಲಿವಿನಲ್ಲಿ ಕುಗ್ಗುವ
ನನ್ನ ಹುಡುಗಿ
ನೀನೆಂದು ಬಾಯ್ಬಿಡುತ್ತೀ
ಸತ್ತ ಪ್ರಶ್ನೆಗಳಿಗೆ ಎಂದು ಉತ್ತರ ಕೊಡುತ್ತೀ
(ಪ್ರಶ್ನೆಗಳು)

ಎಂಬ ಪ್ರಶ್ನೆ ಇದ್ದರೂ, ಹುಡುಗಿ ಉತ್ತರ ನೀಡುತ್ತಾಳೆ ಎಂಬ ಆತ್ಮ ವಿಶ್ವಾಸ ಇಲ್ಲಿಯ ಕವನಗಳಲ್ಲಿ ಗಾಢವಾಗಿ ಪ್ರತಿಪಾದಿತವಾಗಿದೆ. ಆದರೆ ಈ ಉತ್ತರಿಸದ ಅಥವಾ ಉತ್ತರಿಸಲು ಪ್ರಯತ್ನ ಮಾಡದಿರುವ ಹುಡುಗಿಯರ ಪಾಡು ತುಂಬ ನೋವಿನಿಂದ ಇಲ್ಲ ಚಿತ್ರಿತವಾಗಿದೆ.

ಶ್ರೀಯುತ ಹೆಚ್, ಎಸ್. ಶಿವಪ್ರಕಾಶ್ ಅವರು ಮುನ್ನುಡಿಯಲ್ಲಿ ಗುರ್ತಿಸಿರುವಂತೆ ಇಲ್ಲಿಯ ಕವನಗಳ ಭಾವಗೀತಾತ್ಮಕತೆ ಗಮನೀಯವಾದದ್ದು,

ಗಂಧ ಸುಗಂಧ ಪುನುಗುಗಳ
ಹಗಲೆಲ್ಲ ಒಡಲಲ್ಲಿ ಹಿಡಿದು ಮಿಡಿದು
ತಂತಾನೇ ಕಾವೇರಿ ರಾಗಗಳಾಗಿ
ಲಹರಿ ಲಹರಿಗಳಾಗಿ ಬಿರಿಯಲೇಕೆ ನೀನು?
ಚೆಲ್ಲಲೇಕೆ ಕಂಪು ! ತಲ್ಲಣ ನೋವು ನಿರೀಕ್ಷೆ
ನಿನ್ನೆಲ್ಲಾ ಚೆಲುವು ? (ರಾತ್ರಿರಾಣಿ)

ಇಂತಹ ಗೀತಾತ್ಮಕತೆ, ಸ್ವಗತಕ್ಕೆ ಒಂದು ಮಾರ್ದವತೆಯನ್ನು ಆಪ್ತತೆಯನ್ನು ತಂದುಕೊಟ್ಟಿದೆ. ಕಾವ್ಯ ಹುಟ್ಟುವ ಕ್ರಿಯೆಯ ಬಗೆಗಿನ ಬೆರಗು ಮತ್ತು ಅನಿರ್ವಚನೀಯತೆ ಬದುಕನ್ನು ತನ್ನ ತೆಕ್ಕೆಯೊಳಗೆ ತೆಗೆದುಕೊಳ್ಳುತ್ತದೆ. ಏನೋ ಬರೆಯ ಹೊರಟು, ಅದು ಮತ್ತೇನೋ ಆಗಿ ಬಿಡುವ ದುರಂತ ಕಾವ್ಯದಲ್ಲೆಷ್ಟೋ ಬದುಕಿನಲ್ಲೂ ಅಷ್ಟೆ. ಆದರೆ ಆ ಬದಲಾವಣೆಯನ್ನು ಒಪ್ಪಿಕೊಳ್ಳುವುದು ಸುಖದ ಸಂಗತಿಯಲ್ಲ.

ಹೊಸದಾಗಿ ಪಡೆದ ಪೆನ್ನಲ್ಲಿ
ನಿನ್ನ ಚಿತ್ರಿಸಬೇಕೆಂದು ಹೊರಟೆ
ಗೆರೆಗಳು ಮೂಡಿ, ಮುಖ ಗೀಚು ಗೀಚು
ರೂಪ ವಿರೂಪ (ಹೊಸ ಪೆನ್ನು)

ಮಹಿಳಾ ದೂರು ವಿಭಾಗ: ಹಿಂಸೆಗೆ ಇಲ್ಲಿದೆ ಪರಿಹಾರ

ಗಂಗಾ ವಿವಾಹಿತಳಾಗಿ ಎಂಟು ವರ್ಷಗಳಾಗಿವೆ, ಎರಡು ಮಕ್ಕಳ ತಾಯಿ ಆಕೆ. ಕಳೆದ ಆರು ವರ್ಷಗಳಿಂದಲೂ ಮನೆಯಲ್ಲಿ ಒಂದಲ್ಲ ಒಂದು ಕಿರಿಪಿರಿ. ಗಂಡನಿಗೆ ಒಳ್ಳೆಯ ಕೆಲಸವೇನೋ ಇದೆ, ಆದರೆ ಅವನ ಒಲವೆಲ್ಲಾ 'ಇಟ್ಟು ಕೊಂಡವಳ' ಮೇಲೆ. ಗಂಗಾ ಅತ್ತು ಕರೆದರೆ ಬೈಗುಳ, ಇಲ್ಲವೆ ಹೊಡೆತ. ಆರನೇ ತರಗತಿ ವರೆಗೆ ಮಾತ್ರ ಕಲಿತಿರುವ ಅವಳು ತನ್ನ ಕುಟುಂಬದೊಳಗೆ ಇರಲಾರಳು, ಹೊರಗೆ ಬರಲಾರಳು. ಅವಳ ಗಂಡನಿಗೆ 'ಬುದ್ಧಿ' ಹೇಳುವವರಾರು ?

ನಗರದ ಕಾರ್ಖಾನೆಯೊಂದರ ಉದ್ಯೋಗಿ ಸುಧಾಗೆ ಬೆಳಿಗ್ಗೆ 4 ರಿಂದ ರಾತ್ರಿ 10ರ ವರೆಗೆ ದುಡಿತವೇ. ಕಾರ್ಖಾನೆ ಕೆಲಸವಾದುದರಿಂದ 6–30ಕ್ಕೇ ಹೊರಡಬೇಕು. ಮನೇಲಿ ಗೃಹಿಣಿ ಕರ್ತವ್ಯಮಾಡಿ ಇಬ್ಬರು ಮಕ್ಕಳನ್ನು ಶಾಲೆಗೆ ಸಿದ್ಧಪಡಿಸಿ ಹೊರಡಬೇಕು, ಆಕೆ. ಅವಳ ಗಂಡ ಸತೀಶನಿಗೆ ಕಛೇರಿ ಕೆಲಸ. 10 ಗಂಟೆಗೆ ಆಫೀಸಿನಲ್ಲಿ ಇದ್ದರಾಯ್ತು. ಹಾಗೆಂದು ಮಕ್ಕಳ ಜವಾಬ್ದಾರಿ ಏನೂ ಹೊತ್ತಿಲ್ಲ. ಆತ ಸುಶಿಕ್ಷಿತ. ಉದ್ಯೋಗಸ್ಥ, ತಿಳುವಳಿಕೆ ಉಳ್ಳ ಹೆಂಡತಿ ಇರೋದು ಯಾಕೆ ಅಲ್ಲವೆ? ಕಾರ್ಖಾನೆಯಿಂದ ಬಂದ ಮೇಲೆ ಸುಧಾ ಮನೆಕೆಲಸ, ಮಕ್ಕಳ ಹೋಂ ವರ್ಕ್ ಕಡೆ ಗಮನ ಕೊಡಲೇಬೇಕು. ಸತೀಶ ಆಫೀಸಿನಿಂದ ಕ್ಲಬ್, ಇಸ್ಪೀಟು, ಡ್ರಿಂಕ್ಸ್ ಮುಗಿಸಿಬರುವ ವೇಳೆಗೆ ಹೊತ್ತು ಮೀರಿರುತ್ತದೆ. ಸುಧಾಳ ತಾಳ್ಮೆಯೂ ಕಂಗೆಟ್ಟಿರುತ್ತದೆ. ದಿನ ನಿತ್ಯ ಕದನ, ಹೊಡೆತ–ಬಡಿತ. ಕುಡಿತದ ಗಂಡನಿಂದ ವಿಮುಕ್ತಿ ಇಲ್ಲವೆ ಎಂದು ಸುಧಾ ಪ್ರಶ್ನಿಸಿಕೊಳ್ಳುತ್ತಾಳೆ.

ಇದೋ ವಿಳಾಸ :

ಮಹಿಳಾ ದೂರು ವಿಭಾಗ. ಪೋಲೀಸ್‌ಕಮಿಷನರ್ ಕಛೇರಿ ಆವರಣ, ಇನ್‌ಫೆಂಟ್ರಿ ರಸ್ತೆ, ಬೆಂಗಳೂರು. ವೇಳೆ–ಬೆಳಿಗ್ಗೆ 8–30 ರಿಂದ ರಾತ್ರಿ 7–30ರ ವರೆಗೆ.

ಮಹಿಳಾ ಸಲಹಾ ಕೇಂದ್ರದ ವೇಳೆ–ಬೆಳಿಗ್ಗೆ 10–30 ರಿಂದ ಸಂಜೆ 5–30.

ಗಂಗಾ, ಸುಧಾರಂಥ ಹಲವು ಹತ್ತು ಮಹಿಳೆಯರಿಗಾಗಿ ಬೆಂಗಳೂರಿನ ಪೊಲೀಸ್ ಕಮಿಷನರ್ ಕಛೇರಿಯಲ್ಲಿನ "ಮಹಿಳಾ ದೂರು ವಿಭಾಗ" ಬಾಗಿಲು ತೆರೆದು ಕುಳಿತಿದೆ. ಮಹಿಳೆಯರ ಮೇಲಿನ ದೌರ್ಜನ್ಯ ತಡೆಗೆ 1989ರಲ್ಲಿ ಆರಂಭವಾದ ಈ ದೂರು ವಿಭಾಗ ಈಗ ಚಟುವಟಿಕೆಯ ಕೇಂದ್ರವಾಗಿದೆ. ಸಮಾಜದ ವಿವಿಧ ಸ್ತರಗಳ ಮಹಿಳೆಯರು ಯಾವ ಸಂಕೋಚವೂ ಇಲ್ಲದೆ ಇಲ್ಲಿಗೆ ಬಂದು ತಮ್ಮ ತಮ್ಮ ಸಂಕಷ್ಟ ತೋಡಿಕೊಳ್ಳುವು

(16ನೇ ಪುಟದಿಂದ)

ಈ ರೂಪ ವಿರೂಪಗೊಳ್ಳುವುದು ಬೇರೆ ಬೇರೆಯ ನೆಲೆಗಳಲ್ಲಿ. ವ್ಯಕ್ತಿಗತವಾದ ವಿರೂಪದಂತೆಯೇ, ಬಹಳ ವ್ಯಾಪಕವಾದ ಸಾಮಾಜಿಕ ವಿರೂಪಗಳೂ ನಮ್ಮಲ್ಲುಂಟು. ಈ ವಿರೂಪದ ಕ್ರೌರ್ಯ ಪ್ರಖರವಾಗಿದೆ. ಹಾಗಾಗಿಯೇ, 'ಬಿತ್ತಲಾರೆ ಕನಸು ನಿನ್ನ ಮುತ್ತಿಕ್ಕುವ ಕಣ್ಣುಗಳಲ್ಲಿ' ಎಂದು ಅಳುವ ತಾಯಿ, 'ಕೊಂಬೆ ಕೊಂಬೆಯಲ್ಲಿ ಹೆಣವಾಗಿ ತೂಗುವ ಹಾಡುಗಳೆಷ್ಟು' ಎನ್ನುವ ಪ್ರಶ್ನೆ, 'ಕಾಸಿಗೊಂದು ಕನಸ ಮಾರಿ ಗುಲಗಂಜಿಗಳಾಗುವ' ಮದರಂಗಿಯರು, 'ಯಾರದೋ ಜಗಲಿಯಲಿ ಮಲಗಿದ ಅನಾಥ ಬೆಳಕತಿಯುದುವಷ್ಟರಲ್ಲಿ ಕಳ್ಳನಾಗು'ವ ವಾಸ್ತವಗಳು ಇಲ್ಲಿವೆ. ಆದರೆ ಇದನ್ನು ಮೀರಿ ಬೆಳೆದು ಅಂಗೈಯ ತುಂಬ ಬೆಳಕಿನ ಮೊಳಕೆಗಳನ್ನು ಹಿಡಿದು ಬದುಕನ್ನು ಹಸನುಗೈಯಬಲ್ಲ ಆಶಾವಾದ ಇಲ್ಲಿ ಗಾಢವಾಗಿದೆ.

ಮೂವತ್ತು ಕವನಗಳ ಈ ಸಂಕಲನ ಪುಷ್ಪ ಅವರ ಮೊದಲ ಸಂಕಲನವಾಗಿ ಮೆಚ್ಚುಗೆಗೆ ಅರ್ಹವಾಗಿದೆ. ಭಾಷೆಯ ಬಗೆಗೆ ಮತ್ತಷ್ಟು ಕಾಳಜಿವಹಿಸಿದ್ದರೆ ಇನ್ನೂ ಚೆನ್ನಾಗಬಹುದಿತ್ತು. ಅಮೃತಮತಿ ಸ್ವಗತ, ಕೋಗಿಲೆ ಮತ್ತು ಹಾಡು, ಒಂದು ರಾಗದ ಕಾಡು, ಪ್ರೇಮವೆಂದರೆ ಹೀಗೆ, ಆಮೆಗಳು ಮುಂತಾದವು ಗಮನೀಯ ಪದ್ಯಗಳು. □

ದನ್ನು ನೋಡಿದರೆ ಪೋಲೀಸ್ ಇಲಾಖೆ ಏನೋ ಪವಾಡ ಮಾಡಿದೆ ಎಂದೆನಿಸದು. ಏಕೆಂದರೆ ಪೋಲೀಸ್‌ಠಾಣೆ ಮೆಟ್ಟಿಲು ತುಳಿಯಲು ಇಂದಿಗೂ ಮಹಿಳೆಯರು ಹಿಂಜರಿಯುತ್ತಾರೆ. ಆದರೆ 'ಮಹಿಳಾ ದೂರು ವಿಭಾಗ' ದಲ್ಲಿ ಅಂಥ ಭಯವಂತೂ ಇಲ್ಲವೇ ಇಲ್ಲ. ಬದಲಿಗೆ ಎಲ್ಲ ವರ್ಗದ ಮಹಿಳೆಯರೂ ನಿರ್ಭಿಡೆಯಿಂದ ತಮ್ಮ ನೋವು ನಿವೇದಿಸಿಕೊಳ್ಳುತ್ತಾರೆ.

'ಮಹಿಳಾ ದೂರು ವಿಭಾಗ' ದಲ್ಲಿ ದೂರು ಹೇಳಬಹುದು. ಆದರೆ ಮೊಕದ್ದಮೆ ದಾಖಲು ಇಲ್ಲ. ಆ ಔಪಚಾರಿಕ ಶ್ರಮವೆಲ್ಲಾ ಸ್ಥಳೀಯ ಪೋಲೀಸ್‌ಠಾಣೆಗಳಲ್ಲಿ. ಈ ದೂರು ವಿಭಾಗಕ್ಕೆ ಬರುವ ಮಹಿಳೆಯರಲ್ಲಿ ಬಹುಪಾಲು ಮಂದಿ ತಮ್ಮ ಗಂಡನ ಹಿಂಸೆ ವಿರುದ್ಧ ದೂರು ನೀಡುವವರೇ ಆಗಿದ್ದಾರೆ. ಅಂದರೆ ಗಂಡ ಹೆಂಡಿರ ಜಗಳವೇ ಹೆಚ್ಚು, ಎನ್ನುತ್ತಾರೆ ಹೆಡ್‌ಕಾನ್‌ಸ್ಟೇಬಲ್ ಗೋವಿಂದಸ್ವಾಮಿ. ಹೆಂಡತಿ ಬಂದು ದೂರು ನೀಡುವ ಪ್ರಸಂಗವೇ ಹೆಚ್ಚು. ದೂರು ಬಂದ ಕೂಡಲೇ ಗಂಡನಿಗೆ ಪೋಲೀಸರ 'ಆದೇಶ' ಹೋಗುತ್ತದೆ. ಆತನೊಂದಿಗೆ ಸರಳವಾಗಿ ನೇರವಾದ ಮಾತುಕತೆ, ಗಂಡ, ಹೆಂಡತಿ ಜತೆ ಪ್ರತ್ಯೇಕವಾಗಿ, ಅನಂತರ ಜತೆಜತೆಯಾಗಿ ಮಾತುಕತೆಯಾದ ಮೇಲೆ ಹೊಂದಾಣಿಕೆ ಉಂಟಾಗುತ್ತದೆ. ಪರಸ್ಪರ ತಿಳುವಳಿಕೆ ಮೂಡಿಸಿ ಅವರವರ ತಪ್ಪು ತಿದ್ದಿಕೊಳ್ಳುವಂತೆ ಮಾಡುವುದು ನಮ್ಮ ಪ್ರಯತ್ನ ಎನ್ನುತ್ತಾರೆ ಅವರು.

ಗಂಡನ ವಿರುದ್ಧ ಮಾತ್ರವಲ್ಲ, ಅತ್ತೆ-ಮಾವ ಮತ್ತು ಅವರ ಮನೆಯವರ ಕಿರುಕುಳದ ವಿರುದ್ಧ ಕೂಡ ಅಪಾರ ಸಂಖ್ಯೆಯಲ್ಲಿ ದೂರು ಬರುತ್ತದೆ. ಗಂಡನ ಹಿಂಸೆ ತಾಳಲಾರೆ ರಕ್ಷಣೆ ಬೇಕು, ಎಂದು ಕೇಳುವ ಮಹಿಳೆಯರಿಗೆ ಅವರಿರುವ ಬಡಾವಣೆಯ ಪೋಲೀಸ್ ಠಾಣೆ ಮೂಲಕ ಪೋಲೀಸ್ ರಕ್ಷಣೆ ಒದಗಿಸಲಾಗುತ್ತದೆ.

ಕುಟುಂಬ ನ್ಯಾಯಾಲಯದಲ್ಲಿರುವ ಪ್ರಕರಣಗಳ ಹೊಂದಾಣಿಕೆಗೂ ಇಲ್ಲಿ ಪ್ರಯತ್ನ ನಡೆದಿದೆ. ಇದಕ್ಕೆ ನ್ಯಾಯಾಲಯದ ಸಮ್ಮತಿ ಇದೆ.

ಗಂಡ-ಹೆಂಡತಿ ಜಗಳದ ದೂರು ಇಲ್ಲಿ ಹೆಚ್ಚಾಗಿದ್ದರೂ ಉದ್ಯೋಗಸ್ಥ ಮಹಿಳೆ ತನ್ನ ಕಛೇರಿಯಲ್ಲಿ ಅನುಭವಿಸುವ ಹಿಂಸೆ ಬಗೆಗೂ ದೂರು ನೀಡಿ ಪರಿಹಾರ ಪಡೆದುಕೊಳ್ಳಬಹುದು.

ಮಹಿಳಾ ದೂರು ವಿಭಾಗದಲ್ಲಿ ಮಹಿಳೆಯರದೇ ಹೆಚ್ಚಿನ ಕಾರುಬಾರು. ಪೋಲೀಸ್‌ಕಮಿಷನ್ನರ್ ಪ್ರಮುಖ ಮೇಲ್ವಿಚಾರಣೆ ವಹಿಸಿದ್ದರೂ ವಿಶೇಷ ಸ್ಕ್ವಾಡ್‌ನ ಅಸಿಸ್ಟೆಂಟ್ ಕಮಿಷನರ್ ಆಫ್ ಪೋಲೀಸ್ ಉಸ್ತುವಾರಿ ಈ ವಿಭಾಗಕ್ಕೆ ಇಬ್ಬರು ಮಹಿಳಾ ಸಬ್‌ಇನ್‌ಸ್ಪೆಕ್ಟರ್, ಮೂವರು ಹೆಡ್‌ಕಾನ್‌ಸ್ಟೇಬಲ್. ಇಬ್ಬರು ಕಾನ್‌ಸ್ಟೇಬಲ್ ಇದ್ದಾರೆ. ನೆರವಿಗೆ ಒಬ್ಬ ಪುರುಷ ಹೆಡ್‌ಕಾನ್‌ಸ್ಟೇಬಲ್ ಮತ್ತು ಇಬ್ಬರು ಕಾನ್‌ಸ್ಟೇಬಲ್ ಇದ್ದಾರೆ. ಗಂಗಮ್ಮ ಮತ್ತು ಅನಸೂಯಮ್ಮ ಸಬ್‌ಇನ್‌ಸ್ಪೆಕ್ಟರ್.

ದೂರು ವಿಭಾಗವು ಒಂದೊಂದು ಪ್ರಕರಣದ ಇತ್ಯರ್ಥಕ್ಕೂ ಗಂಡ-ಹೆಂಡಿರ ಜತೆ ಆರು ಅಥವಾ ಏಳು ಬಾರಿ ಕೂತು ಮಾತಾಡಬೇಕಾಗುತ್ತದೆ. ಪೂರ್ಣ ತಿಳುವಳಿಕೆ ಬರುವವರೆಗೆ ತಾಳ್ಮೆಯಿಂದ ಅವರೊಂದಿಗೆ ಪೋಲೀಸ್ ಅಧಿಕಾರಿಗಳು ಮಾತಾಡಬೇಕಾಗುತ್ತದೆ.

'ಗಂಡ-ಹೆಂಡಿರ ಜಗಳ ಉಂಡು ಮಲಗುವವರೆಗೆ' ಎಂಬ ಗಾದೆಯನ್ನು 'ಗಂಡ-ಹೆಂಡಿರ ಜಗಳ ದೂರು ವಿಭಾಗದವರೆಗೆ' ಎಂದು ಬದಲಿಸಿದರೆ ಹೇಗಿರುತ್ತದೆ? ☐

☐ ಮೂಕಿ ಚಿತ್ರಗಳ ಕಾಲದ ನಟಿ ಫಾತ್ಮಾ ಬೇಗಮ್ ಮೊದಲ ಮಹಿಳಾ ಚಲನಚಿತ್ರ ತಯಾರಕಿ. ಈಕೆ 1926ರಲ್ಲೇ, 'ಬುಲ್‌ಬುಲೆ ಪರಸ್ತಾರ್' ಚಿತ್ರಕ್ಕೆ ಕತೆ ಬರೆದು, ನಿರ್ದೇಶಿಸಿ, ನಿರ್ಮಾಪಿಸಿದ್ದಲ್ಲದೆ ತನ್ನ ಮೂವರು ಹೆಣ್ಣು ಮಕ್ಕಳೊಂದಿಗೆ ನಟಿಸಿಯೂ ಇದ್ದಳು.

★ ★ ★ ★ ★

☐ ಮಧ್ಯಪ್ರದೇಶದ ಮಂಡಸೂರ್‌ನ ಪಾರ್ವತಿ ಆರ್ಯ ಭಾರತದ ಮೊಟ್ಟ ಮೊದಲ ಟ್ರಕ್ ಚಾಲಕಿ. ಈಕೆ ಟಾಟಾ 120s ಮಾದರಿಯ ಟ್ರಕ್ಕನ್ನು ಓಡಿಸುತ್ತಾಳೆ, ಕಳೆದ 15 ವರ್ಷಗಳಲ್ಲಿ ನಾಲ್ಕೂವರೆ ಲಕ್ಷ ಕಿಲೋಮೀಟರ್ ಚಲಿಸಿರುವ ಈಕೆಗೆ, ಪುರುಷ ಚಾಲಕರಿಗಿರುವಂತೆ ಸಹಾಯಕರಿಲ್ಲ. ಏಕಾಂಗಿಯಾಗಿ ಓಡಿಸುವ ಈಕೆ ತನ್ನ ಆಹಾರವನ್ನು ತಾನೇ ತಯಾರಿಸಿ ತಂದು, ಗಾಡಿಯಲ್ಲೇ ತಿಂದು ಮಲಗುತ್ತಾಳೆ. ಟ್ರಕ್ ಚಾಲಕರ ಢಾಬಾಗಳಿಂದ ದೂರವೇ ನಿಲ್ಲುತ್ತಾಳೆ.

ಕುಟುಂಬ ಸಲಹಾ ಕೇಂದ್ರ

ಕರ್ನಾಟಕ ರಾಜ್ಯ ಸಮಾಜ ಕಲ್ಯಾಣ ಸಲಹಾ ಮಂಡಳಿ ರೂಪಿಸಿರುವ 'ಕುಟುಂಬ ಸಲಹಾ ಕೇಂದ್ರ'ವು ಪೊಲೀಸ್ ಕಮಿಷನರ್ ಕಛೇರಿಯಲ್ಲಿನ 'ಮಹಿಳಾ ದೂರು ವಿಭಾಗ'ದಲ್ಲಿ ಚಟುವಟಿಕೆಯ ಚಿಲುಮೆಯಾಗಿದೆ. ಇದೇ ವರ್ಷದ ಜೂನ್ 6 ರಂದು ಅಸ್ತಿತ್ವಕ್ಕೆ ಬಂದ ಈ ಕೇಂದ್ರವು ಈಗಾಗಲೇ 34 ಪ್ರಕರಣಗಳ ಬಗೆಗೆ ಕಾರ್ಯ ನಿರ್ವಹಿಸಿದೆ. ಸಮಾಜ ಕಲ್ಯಾಣ ಸಲಹಾ ಮಂಡಳಿ ಆರು ಮಂದಿ ಸಲಹೆಗಾರರನ್ನು ನೇಮಕ ಮಾಡಿದೆ. ಅವರಲ್ಲಿ ಹೇಮಾ ದೇಶಪಾಂಡೆ ಅವರು ಮೇಲ್ವಿಚಾರಕರಾಗಿದ್ದಾರೆ. ಈ ಆರೂ ಮಹಿಳಾ ಸಲಹೆಗಾರರು ಸಮಾಜಕಲ್ಯಾಣದಲ್ಲಿ ಮಾಸ್ಟರ್ ಡಿಗ್ರಿ ಪಡೆದಿರುವವರು.

ಹೆಸರೇ ಹೇಳುವಂತೆ ಈ ಸಲಹಾ ಕೇಂದ್ರವು ಮಹಿಳೆಯರ ಕೌಟುಂಬಿಕ ಸಮಸ್ಯೆಗಳ ಪರಿಹಾರಕ್ಕೆ ಸಲಹೆ ನೀಡುತ್ತದೆ. ಸಾಮಾಜಿಕ ಹಾಗೂ ಸಾಂಸ್ಕೃತಿಕ ಹಿನ್ನೆಲೆಯಲ್ಲಿ ಮಹಿಳೆಯರ ಸಮಸ್ಯೆಗಳನ್ನು ವಿಶ್ಲೇಷಿಸಲಾಗುತ್ತದೆ. ತನ್ನ ಕುಟುಂಬದಲ್ಲಿ ತಾನು ಅನುಭವಿಸುವ ಹಿಂಸೆ ಬಗೆಗೆ ದೂರು ಹೇಳಿಕೊಳ್ಳುವ ಮಹಿಳೆಯರ ಜತೆ ಒಳ್ಳೆಯ ವಾತಾವರಣದಲ್ಲಿ ಮಾತುಕತೆ ನಡೆಯುತ್ತದೆ. ಆಕೆಯ ಬದುಕಿನ ಹಿನ್ನೆಲೆಯ ಪರಿಚಯವಾಗುತ್ತದೆ. ಗಂಡ–ಹೆಂಡತಿ ಜಗಳವನ್ನು ಒಂದೇ ದೃಷ್ಟಿಕೋನದಿಂದ ನೋಡುವುದಿಲ್ಲ. ಗಂಡನೊಂದಿಗೂ ಅಷ್ಟೇ ಹಿತವಾಗಿ ಮಾತುಕತೆ ನಡೆಯುತ್ತದೆ. ಕುಟುಂಬ ಒಡೆಯುವುದನ್ನು ತಡೆಯುವುದು ನಮ್ಮ ಪ್ರಯತ್ನವೆನ್ನುತ್ತಾರೆ ಹೇಮಾ.

ಕುಡಿತ, ವಿವಾಹದ ಆಚೆಗಿನ ಸಂಬಂಧ (ಅನೈತಿಕ) ಇವೇ ಮುಂತಾದವು ಜಗಳಕ್ಕೆ ಕಾರಣವಾಗಿರುತ್ತದೆ. ಉಭಯತ್ರರಿಗೂ ಸಮಾಧಾನವಾಗುವಂತೆ ಅವರಲ್ಲಿ ಅರಿವು ಮೂಡಿಸುವ ಕಷ್ಟಕರ ಪ್ರಯತ್ನ ನಮ್ಮದು, ಎನ್ನುತ್ತಾರೆ ಅವರು. ಕಾನೂನು ಅಗತ್ಯದ ಪ್ರಕರಣಗಳನ್ನು ಪೊಲೀಸರಿಗೆ ಒಪ್ಪಿಸಲಾಗುತ್ತದೆ. ಅಗತ್ಯವಿರುವ ಮಹಿಳೆಯರಿಗೆ ಕಾನೂನು ಸಲಹೆ ಕೂಡ ಒದಗಿಸಲಾಗುವುದು.

ಮಹಿಳಾ ದೂರು ವಿಭಾಗ ಮತ್ತು ಮಹಿಳಾ ಸಲಹಾ ಕೇಂದ್ರ ಪೂರಕವಾಗಿ ಕೆಲಸ ಮಾಡುತ್ತವೆ. ನಮ್ಮಲ್ಲಿ ಇರುವವರಲ್ಲಿ ಹೆಚ್ಚು ಮಂದಿ ಮಧ್ಯಮವರ್ಗ ಹಾಗೂ ಉದ್ಯೋಗಸ್ಥ ದಂಪತಿಗಳೆಂಬುದು ಗಮನಾರ್ಹ ಎನ್ನುತ್ತಾರೆ ಹೇಮಾ. 'ನಮ್ಮದು ಸರ್ಕಾರಿ ಮತ್ತು ಸರ್ಕಾರಿಯೇತರ ಸಂಸ್ಥೆಗಳ ನಡುವಣ ಸಮನ್ವಯ ಕೆಲಸ' ಎಂಬುದು ಅವರ ಪ್ರತಿಪಾದನೆ.

ಕಂಬನಿ

ಸ್ವಾತಂತ್ರ್ಯಪೂರ್ವದ ಅವಧಿಯಲ್ಲಿ ಮಕ್ಕಳ ಮಹಿಳೆಯರ ಶ್ರೇಯಸ್ಸು ಅಭಿವೃದ್ಧಿಗಾಗಿ ಶ್ರಮಿಸಿದ ಧೀಮಂತ ಸ್ತ್ರೀಚೇತನಗಳಲ್ಲಿ ಒಬ್ಬರು ಶ್ರೀಮತಿ ಎಚ್. ವೈ. ಸರಸ್ವತಮ್ಮ.

ಖ್ಯಾತ ಸ್ವಾತಂತ್ರ್ಯ ಹೋರಾಟಗಾರ ಶ್ರೀ ವಾಜಪೇಯಂ ವೆಂಕಟಸುಬ್ಬಯ್ಯ ಮತ್ತು ಶ್ರೀಮತಿ ಚೆಲ್ಲಮ್ಮ ದಂಪತಿಗಳ ಮಗಳಾದ ಸರಸ್ವತಮ್ಮ ಹುಟ್ಟಿದ್ದು ಬೆಂಗಳೂರಿನಲ್ಲಿ, 6-4-1906ರಲ್ಲಿ. ಮಾಧ್ಯಮಿಕ ಶಾಲಾ ಶಿಕ್ಷಣ ಮುಗಿಸಿ, ಸಂಸ್ಕೃತ ವಿದ್ವಾನ್ ಯೋಗಾನರಸಿಂಹ ಅವರ ಕೈ ಹಿಡಿದು, ಮುಂದೆ ಪತಿಯ ಬೆಂಬಲ, ಪುರೋಗಾಮಿ ವಿಚಾರಗಳಿಂದ ಸರಸ್ವತಮ್ಮ ತಮ್ಮದೇ ಆದ ವ್ಯಕ್ತಿತ್ವವನ್ನು ರೂಪಿಸಿಕೊಂಡರು.

ಬೆಂಗಳೂರಿನ ಮಕ್ಕಳಕೂಟದ ಸ್ಥಾಪಕಿ ಆರ್. ಕಲ್ಯಾಣಮ್ಮನವರ ವ್ಯಕ್ತಿತ್ವದ ಪ್ರಭಾವವಲಯದಲ್ಲಿ ಸರಸ್ವತಮ್ಮ ದಿಟ್ಟ ಕರ್ತೃತ್ವಶಕ್ತಿ, ಸ್ವತಂತ್ರ ಚಿಂತನೆ ಮತ್ತು ಪ್ರಬುದ್ಧ ಬರಹಗಳನ್ನು ಮೈಗೂಡಿಸಿಕೊಂಡರು. ಕಲ್ಯಾಣಮ್ಮನವರ ಪ್ರೇರಣೆ ಮತ್ತು ಪತಿಯ ಬೆಂಬಲದಿಂದ 1942ರಲ್ಲಿ ಮೈಸೂರಿನಲ್ಲಿ ತಾವೂ ಮಕ್ಕಳ ಕೂಟವೊಂದನ್ನು ಕಟ್ಟಿ, ಅವರ ಕಾರ್ಯದರ್ಶಿಯಾಗಿ 18 ವರ್ಷ ನಿಸ್ಪೃಹತೆಯಿಂದ ದುಡಿದರು.

ಮೈಸೂರು ಆಕಾಶವಾಣಿಯಿಂದ ಮಕ್ಕಳಿಗಾಗಿ ಅವರು ನೀಡುತ್ತಿದ್ದ ಕಾರ್ಯಕ್ರಮಗಳು, ಮಕ್ಕಳಿಗಾಗಿ ಕನ್ನಡಕ್ಕೆ ಅವರು ಅನುವಾದಿಸಿದ "ಚಿತ್ರಭಾರತ" ಸರಸ್ವತಮ್ಮನವರಿಗೆ ಕೀರ್ತಿ ತಂದ ವಿಶೇಷ ಕೊಡುಗೆಗಳು. 'ಪಾರ್ವತಿಬಾಯಿ ಅತಾವಳೆ' ಕುರಿತ ಕಿರುಹೊತ್ತಿಗೆ, 'ಅಜ್ಜಿಯ ರಾಜ್ಯ' ಎಂಬ ಕಿರುನಾಟಕ ಮಕ್ಕಳ ಸಾಹಿತ್ಯಕ್ಕೆ ಅವರ ಇನ್ನಿತರ ಕೊಡುಗೆಗಳು.

ಇಂಥ ಹಿರಿಯ ದಿಟ್ಟ ವಿಚಾರಪರ ಚೇತನವಾಗಿದ್ದ ಶ್ರೀಮತಿ ಸರಸ್ವತಮ್ಮ ಇತ್ತೀಚೆಗೆ 26-6-93ರಂದು ತಮ್ಮ 87ನೆಯ ಇಳಿವಯಸ್ಸಿನಲ್ಲಿ ಇಲ್ಲವಾದರು. ಅವರಿಗಾಗಿ ಅಚಲದ ಕಂಬನಿಗಳು.

ವಸಾಹತುಶಾಹಿ ಆಡಳಿತದ ಕಾಲದ ಎಲ್ಲ ಬಗೆಯ ರಾಜಕೀಯ ಹೋರಾಟಗಳಲ್ಲಿ ಭಾರತದ ಹಳ್ಳಿಯ ಹೆಣ್ಣುಮಕ್ಕಳು ಖಂಡಿತ ಪಾಲುಗೊಂಡಿದ್ದಾರೆ. ಆದರೆ ಅವರ ಪಾಲುದಾರಿಕೆ ಎಂಥದು, ಎಷ್ಟು. ಹೇಗೆ ಎಂಬುದು ಮಾತ್ರ ಜಾತಿ, ವರ್ಗಗಳಿಗೆ ಮೀರಿದ ಬೇರೆ ಚೌಕಟ್ಟುಗಳಿಗೆ ಒಳಪಟ್ಟಿವೆ :

1. ಈ ಚಳವಳಿಗಳ ಪುರುಷ ಮುಂದಾಳುಗಳು ತಮ್ಮ ಹೋರಾಟವನ್ನು ಬಲಪಡಿಸಿ ಕೊಳ್ಳುವುದಕ್ಕಾಗಿ ಹೆಣ್ಣು ಮಕ್ಕಳ ಸಂಘಟನೆಗೆ ಚಾಲನೆ ನೀಡಿದ್ದಾರೆಂಬುದು ಮೊದಲ ನಿರ್ಣಾಯಕ ಸಂಗತಿ.

2. ಸಾಂಪ್ರದಾಯಿಕವಾಗಿ ಹೆಣ್ಣುಮಕ್ಕಳು ಕುಟುಂಬಕ್ಕೆ ಬದ್ಧರು. ಅವರ ಕರ್ತವ್ಯಪ್ರಜ್ಞೆ ತೀರಾ ನಿರ್ದಿಷ್ಟವಾದದ್ದು. ಪುರುಷ ಮುಂದಾಳುಗಳು ಮಹಿಳೆಯರ ಈ ಅಂಶಗಳನ್ನು ಮಾತನಾಡದೆಯೇ ಶೋಷಿಸುತ್ತ ಹೋರಾಟದ ತೀರಾ ಕಷ್ಟದ ಕಾಲದಲ್ಲಿ ಹೆಂಗಸರ ದೈನಂದಿನ 'ಸಹಜ' ನಡವಳಿಕೆಯನ್ನು ಕೈಬಿಡಲು ಎಷ್ಟರ ಮಟ್ಟಿಗೆ ಉದಾರತೆಯಿಂದ 'ಅನುಮತಿ' ನೀಡಿದ್ದಾರೆ ಎನ್ನುವುದು ಇನ್ನೊಂದು ಮುಖ್ಯಸಂಗತಿ.

3, ಹೋರಾಟದ ಗಳಿಗೆಯ ಅಗತ್ಯ ಮುಗಿದ ಕೂಡಲೇ ಮೂಲತಃ ಸಂಕುಚಿತ ಮನೋಧರ್ಮದವರಾದ ಪುರುಷರು ಎಷ್ಟು ಬಲವಾಗಿ ಹೆಂಗಸರನ್ನು ಅವರ 'ಮನೆಯ' ಕ್ಷೇತ್ರಕ್ಕೇ ಮತ್ತೆ ತಳ್ಳಿಟ್ಟಿದ್ದಾರೆಂಬುದು ಗ್ರಾಮೀಣ ಮಹಿಳೆಯರ ಹೋರಾಟ ಬಂಡಾಯಗಳ ವ್ಯಾಪ್ತಿ, ಮಿತಿಗಳನ್ನು ನಿರ್ಧರಿಸುವಂಥ ಮತ್ತೊಂದು ಮುಖ್ಯ ಸಂಗತಿ,

(ಲೀಲಾ ಕಸ್ತೂರಿ ಅವರ **Rural women in struggle in Colonial India**– ಲೇಖನದಿಂದ)

Reg No MAG (5) PRC,DEGL 036/89/87
BOOK-POST/Periodicals

To,

If undelivered please return to :
Jagruthi Mahila Adhyayana Kendra
401, Vijay Tower, 2nd Main, RPC Layout
Vijayanagar, II Stage, Bangalore-40
Pin-560 040